8. ವರದಿಯನ್ನೊಪ್ಪಿಸುವುದು

ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲಲ್ಯಾಣ ಸಮಿತಿ) : ಮಾನ್ಯ ಅಧ್ಯಕ್ಷರೆ, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಯ ಹತ್ತೊಂಬತ್ತನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಒಪ್ಪಿಸಲಾಯಿತು.

9. ವಿಷಯ : ಪ್ರಶ್ನೋತ್ತರ ವೇಳೆ ಬಗ್ಗೆ

ಅಧ್ಯಕ್ಷರು : ಇವೊತ್ತು ಪ್ರಶ್ನೋತ್ತರ ಅವಧಿಗೆ ಸುಮಾರು ಒಂದು ಗಂಟೆ ಐವತ್ತು ನಿಮಿಷಗಳಷ್ಟು ಕಾಲಾವಕಾಶ ತೆಗೆದುಕೊಂಡಿರುವುದರಿಂದ ನಾನು ಎಲ್ಲಾ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಾಳೆಯಿಂದ ಸದಸ್ಯರುಗಳು ಪೂರಕ ಪ್ರಶ್ನೆಗಳನ್ನು ಕೇಳುವುದರ ಬಗ್ಗೆ ಎರಡು ಸಲ ಆಲೋಚಿಸಬೇಕಾಗಿತ್ತದೆ. ಇನ್ನುಮುಂದೆ ನಾನು ಪ್ರಶ್ನೋತ್ತರ ಅವಧಿಯನ್ನು ಒಂದು ಗಂಟೆ ಕಾಲಕ್ಕೆ ಸರಿಯಾಗಿ ಮುಗಿಸುತ್ತೇನೆ. ಒಂದು ವೇಳೆ ಒಂದು ಗಂಟೆಯೊಳಗೆ ಯಾವುದಾದರೂ ಪ್ರಶ್ನೆಗಳು ಮುಗಿಯದೆ ಬಾಕಿ ಇದ್ದಲ್ಲಿ ಅಂತಹ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ, ಆಗ ನಾನು ಅಸಹಾಯಕನಾಗುತ್ತೇನೆ. ಈ ವಿಷಯವನ್ನು ಮನಸ್ಸಿನಲ್ಲಿಟ್ಟು ಕೊಂಡು ಎಲ್ಲಾ ಸದಸ್ಯರೂ ನನ್ನ ಜೊತೆ ಸಹಕರಿಸಬೇಕು. ಯಾವುದೇ ಕಾರಣಕ್ಕೂ ನಾಳೆಯಿಂದ ಪ್ರಶ್ನೋತ್ತರ ಅವಧಿಯನ್ನು ಒಂದು ಗಂಟೆ ನಂತರ ವಿಸ್ತರಿಸುವುದಕ್ಕೆ ನಾನು ಸಿದ್ಧನಾಗಿರುವುದಿಲ್ಲ. ಆದುದರಿಂದ ಇದಕ್ಕೆ ಎಲ್ಲರೂ ಸಹಕರಿಸಬೇಕೆಂದು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ.

10. ನಿಲುವಳಿ ಸೂಚನೆ

ವಿಷಯ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ದಿನಾಂಕ 1-7-1997 ರಿಂದ ಜಾರಿಗೆ ಬರುವಂತೆ ವಿದ್ಯುತ್ ದರವನ್ನು ಶೇಕಡಾ 250ರಿಂದ 250 ರವರೆಗೆ ಹೆಚ್ಚಳ ಮಾಡಿರುವುದರಿಂದ ವಿದ್ಯುತ್ ಗ್ರಾಹಕರಿಗಾಗಿರುವ ತೊಂದರೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಮೊಟ್ಟ ಮೊದಲನೆಯದಾಗಿ ನಾನು ವಿರೋಧ ಪಕ್ಷದ ವತಿಯಿಂದ ತಮಗೆ ಅಭಿನಂದಿಸುತ್ತೇನೆ. ವಿದ್ಯುತ್ ದರ ಹೆಚ್ಚಳದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಬೇಕೆಂದು ಎಲ್ಲಾ ವಿರೋಧ ಪಕ್ಷಗಳು ಒಂದೊಂದು ರೂಪದಲ್ಲಿ ನಿಲುವಳಿ ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದು, ಈ ಸಂಬಂಧ ನಿಲುವಳಿ ಸೂಚನೆ ಮೂಲಕ ವಿಷಯ ಪ್ರಸ್ತಾಪಿಸಲು

ತಾವು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ನಿಲುವಳಿ ಸೂಚನಾ ಪತ್ರಗಳನ್ನು ಕಾಂಗ್ರೆಸ್ ಪಕ್ಷ, ಬಿ.ಜೆ.ಪಿ. ಕನ್ನಡ ಕಳುವಳಿಯ ವಾಟಾಳ್ ಪಕ್ಷ, ರೈತ ಸಂಘದ ಕೆ. ಎಸ್. ಪುಟ್ಟಣಯ್ಯ, ಸಿಪಿಎಂ ಪಕ್ಷದ ಜಿ. ವಿ. ಶ್ರೀ ರಾಮರೆಡ್ಡಿಯವರು, ಬಿ.ಎಸ್. ಪಿ. ಮತ್ತು ಎಂ.ಇ.ಎಸ್. ನವರೆಲ್ಲರೂ ಕೊಟ್ಟಿದ್ದಾರೆ. ಎಲ್ಲರೂ ಒಟ್ಟಾರೆ ಈ ಒಂದು ವಿಷಯದಲ್ಲಿ ಇವೊತ್ತು ಪ್ರಸ್ತಾಪಿಸಬೇಕೆಂದಿದ್ದೇವೆ. ಈ ಕುರಿತು ಈಗಾಗಲೇ ಇಬ್ಬರು ರಾಜ್ಯ ಮಂತ್ರಿಗಳನ್ನು ಕೇಳಲಾಗಿ ಅವರು ಇದನ್ನು ಮಾಡುವುದಿಲ್ಲವೆಂದು, ಮುಖ್ಯ ಮಂತ್ರಿಗಳೇ ಇದನ್ನು ಮಾಡಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಏಕೆಂದರೆ, ಇದು ದೊಡ್ಡ ನಿರ್ಣಯ ತೆಗೆದು ಕೊಳ್ಳುವಂಥಾದ್ದಾಗಿದ್ದು, ಕ್ಯಾಬಿನೆಟ್‌ನಲ್ಲಿ ಇದರ ನಿರ್ಣಯ ತೆಗೆದುಕೊಳ್ಳುವಂಥದ್ದಾಗಲೀ ಅಥವಾ ನೇರವಾಗಿದ್ದು, ಕೆ.ಇ.ಬಿ.ಯವರ ಜೊತೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದಾದ್ದರಿಂದ ಮುಖ್ಯಮಂತ್ರಿಗಳನ್ನು ತಾವು ಸದನಕ್ಕೆ ಈಗ ಕರೆದಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಆರ್. ವಿ. ದೇಶಪಾಂಡೆ : ಸದನಕ್ಕೆ ಬರಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಕಳುಹಿಸಿದ್ದೇವೆ. ಅವರು ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಬಂದರೆ ಉತ್ತಮ, ಬರಲಿಲ್ಲವೆಂದರೆ ಚೆನ್ನಾಗಿರುವುದಿಲ್ಲ, ಅಲ್ಲದೆ, ಇದರ ಬಗ್ಗೆ ಪದೇ ಪದೇ ಅವರಲ್ಲಿ ಕೇಳಿಕೊಳ್ಳುವುದು ಸರಿಯಿಲ್ಲ. ನಾನು ವಿಷಯಕ್ಕೆ ಈಗ ನೇರವಾಗಿ ಬರುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 1-7-97ರಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಜಾರಿಗೆ ಬರುವಂತೆ ಎಲ್ಲಾ ವಿಧದ ಉದಾಹರಣೆಗೆ, ರೈತರುಗಳ ಪಂಪುಸೆಟ್ಟುಗಳಿಗೆ, ಭಾಗ್ಯಜ್ಯೋತಿ ಬಳಕೆದಾರರು, ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ, ಮನೆ ವಿದ್ಯುತ್ ಬಳಕೆದಾರರಿಗೆ ಶೇಕಡಾ 25 ರಿಂದ 250ರವರೆಗೆ ವಿದ್ಯುತ್ ದರದಲ್ಲಿ ಹೆಚ್ಚಳ ಮಾಡಿರುವುದರಿಂದ ರಾಜ್ಯದ ಎಲ್ಲಾ ವಿದ್ಯುತ್‌ಗ್ರಾಹಕರಿಗೆ ಉಂಟಾಗಿರುವ ತೊಂದರೆ ಬಗ್ಗೆ ಚರ್ಚಿಸಲು ಸದನದಲ್ಲಿ ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿ ನಾವೆಲ್ಲರೂ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ.ಈ ಹಿಂದೆ ನಿಲುವಳಿ ಸೂಚನೆಯನ್ನು ಇದೇ ವಿಷಯದ ಮೇಲೆ ತಂದಿದ್ದು, ಆದಾಗ 4-5 ತಿಂಗಳುಗಳಲ್ಲೇ ಪುನಃ ನಿಲುವಳಿ ಸೂಚನೆಯನ್ನು ತರುವ ಪ್ರಮೇಯವಾದರೂ ಏಕೆ ಬಂತು? ತಾವು ದೊಡ್ಡ ಮನಸ್ಸು ಮಾಡಿ ನಿಲುವಳಿ ಸೂಚನೆ ಮೇಲೆ ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ರೈತರ ಬಗ್ಗೆ, ಬಡವರ ಬಗ್ಗೆ ಮತ್ತು ಏ. ಇ.ಹೆಚ್. ಎಂದು ಹೇಳಿ ನಾವೇನು ವಿದ್ಯುತ್‌ನ್ನು ಉಪಯೋಗ ಮಾಡಿಕೊಳ್ಳುತ್ತೇವೆ ಅಂಥ ಬಳಕೆದಾರರ ಬಗ್ಗೆ, ಕಡು ಬಡವರಿಗೆ ಇರುವ ಭಾಗ್ಯಜ್ಯೋತಿ ಕಾರ್ಯಕ್ರಮದಂತೆ ಒಂದು ಬಲ್ಬ್‌ನ್ನು

ಇಟ್ಟುಕೊಂಡು ಉಪಯೋಗ ಪಡೆದುಕೊಳ್ಳುತ್ತಿರುವವರಿಗೂ ಈ ಸರ್ಕಾರ ದರವನ್ನು ಏರಿಸುವ ಕ್ರಮವನ್ನು ಬಿಟ್ಟಿಲ್ಲ. ಅಂದರೆ ಕಡುಬಡವರಿಂದ ಹಿಡಿದು ದೊಡ್ಡ ಕೈಗಾರಿಕೆಗಳವರೆಗೂ ತಾವು ವಿದ್ಯುತ್ ದರವನ್ನು ಏರುಸಿದ್ದೀರಿ. ಆರು ತಿಂಗಳ ಹಿಂದೆ ನಾರು ಈ ರೀತಿ ವಿದ್ಯುತ್ ದರ ಹೆಚ್ಚಳ ಮಾಡಿರುವುದು ಸರಿಯಲ್ಲ, ಸಾಮಾನ್ಯ ಜನರಿಗೆ ತೊಂದರೆ ಕೊಡುತ್ತಿದ್ದೀರಿ ಎಂದು ಧರಣಿ ಮಾಡಿ ತಮ್ಮ ಗಮನಕ್ಕೆ ತಂದಿದ್ದೆವು, ಆದ್ದರಿಂದಾಗ ಅಂದು ಪಂಪ್‌ಸೆಟ್‌ಗಳ ಮೇಲಿದ್ದ 300 ರೂಪಾಯಿಗಳನ್ನು 100 ರೂಪಾಯಿಗಳಿಗೆ ಇಳಿಸಲು ಸಾಧ್ಯವಾಯಿತು. ಮತ್ತು ಮೀಟರ್‌ಗಳ ಮೇಲೆ ಇದ್ದ ಹೆಚ್ಚು ಫಿಕ್ಸ್‌ಡ್ ಡಿಪಾಜಿಟ್ ಹಣವನ್ನು ಕಡಿಮೆ ಮಾಡಿಸಲು ಸಾಧ್ಯವಾಯಿತು. ಪ್ರತಿ ಪೋಲ್ಸ್ ಮೇಲೆ 5000 ದಂಡವೇನಿತ್ತು ಅದನ್ನು ಕಡಿಮೆ ಮಾಡಿಸಿದೆವು. ಈ ರೀತಿ ನಮಗೆ ತೃಪ್ತಿ ಇಲ್ಲದಿದ್ದರೂ ಸಹ, ಸಾಮಾನ್ಯ ಜನರಿಗೆ ತೃಪ್ತಿ ತಂದಿದ್ದರೂ ಸಹ ಸಾರ್ವಜನಿಕ ಹಿತದೃಷ್ಟಿಯಿಂದ ರಾಜ್ಯದ ಮತ್ತು ಕೆ.ಇ.ಬಿ. ಹಿತದೃಷ್ಟಿಯಿಂದ ತಾವು 6 ತಿಂಗಳ ಹಿಂದೆ ಏರಿಸಿದ್ದ ವಿದ್ಯುತ್ ದರದಲ್ಲಿ ಸ್ವಲ್ಪ ಮಟ್ಟಿಗೆ ಒಪ್ಪಿಕೊಂಡೆವು. ನಾವು ಮನಃ ಪೂರ್ವಕವಾಗಿ ಯಾವುದನ್ನೂ ಒಪ್ಪಿಕೊಳ್ಳಲಿಲ್ಲ . ಆದರೂ ಸ್ವಲ್ಪಮಟ್ಟಿಗೆ ಒಪ್ಪಿಕೊಂಡು, ಆ ಮಾತಿಗೆ ಮನ್ನಣೆ ಕೊಟ್ಟು ಕೊಂಡು ಹೋಗಿದ್ದೆವು. ಆದರೆ ಈ ಮಧ್ಯದಲ್ಲಿ ಕೇವಲ ಮೂರು ನಾಲ್ಕು ತಿಂಗಳಿನಲ್ಲಿಯೇ ಮತ್ತೆ ಹೊಸ ವಿದ್ಯುತ್ ದರವನ್ನು ನಿಗದಿಮಾಡಿ ಹೊಸ ಷೆಡ್ಯೂಲ್‌ನ್ನು ಬದಲಾವಣೆ ಮಾಡಿ ಈ ವರ್ಷ ಪುನಃ ಸುಮಾರು 25 ಪರ್‌ಸೆಂಟ್‌ನಿಂದ 250 ಪರ್‌ಸೆಂಟ್‌ವರೆಗೆ ವಿದ್ಯುತ್ ದರವನ್ನು ತಾವು ಏರಿಸಿದ್ದೀರೆಂದರೆ ಈ ಸರ್ಕಾರ ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇಲ್ಲ, ರೈತರ ಬಗ್ಗೆ ಕಾಳಜಿ ಇಲ್ಲವೆಂದು ಹೇಳಬೇಕಾಗುತ್ತದೆ. ನಮ್ಮ ಕಡೆ ಗಾದೆ ಹೇಳುವಂತೆ ಇವರು ನಾಚಿಕೆಯನ್ನೆಲ್ಲಾ ಬಿಟ್ಟಿದ್ದಾರೆ. ಇವರಿಗೆ ನಾಚಿಕೆ ಸ್ವಲ್ಪವಾದರೂ ಇದಿದ್ದರೆ ಈ ಕೆಲಸವನ್ನು ಮಾಡುತ್ತಿರಲಿಲ್ಲ. ಸದನ ಒಂದು ತಿಂಗಳಿನಲ್ಲಿ ಸೇರುತ್ತಿದೆ. ಮೂವತ್ತನೆ ತಾರೀಖಿನ ದಿವಸ ತರಾತುರಿಯಲ್ಲಿ ಆದೇಶವನ್ನು ಇಷ್ಯೂ ಮಾಡಿ ಸಣ್ಣ ಭಾಗ್ಯ ಜ್ಯೋತಿ ಮನೆಯನ್ನು ಬಿಡದೆ ದೊಡ್ಡ ಕೈಗಾರಿಕೆಗಳವರೆಗೆ ಸುಮಾರು 250 ಪರ್‌ಸೆಂಟ್‌ವರೆಗೆ ವಿದ್ಯುತ್ ದರವನ್ನು ಏರಿಸಿ ಇವತ್ತಿನ ದಿವಸ ದೊಡ್ಡ ಹೊರೆಯನ್ನು ಬಡವರ ಮೇಲೆ ಕರ್ನಾಟಕ ಜನತೆಯ ಮೇಲೆ ಹೇರಿದ್ದೀರಿ. ಐವತ್ತೆರಡು ಸಾವಿರ ಹಳ್ಳಿಗಳೀನಿವೆ ಅಂದರೆ ಇಪ್ಪತ್ತೊಂಬತ್ತು ಸಾವಿರ ರೆವಿನ್ಯೂ ಹಳ್ಳಿಗಳು, ಸುಮಾರು ಇಪ್ಪತ್ತೈದು ಇಲ್ಲವೇ ಇಪ್ಪತ್ತಾರು ಸಾವಿರ ಹ್ಯಾಮ್‌ಲೆಟ್ಸ್‌ಗಳಿಲ್ಲವನ್ನು ಸೇರಿಸಿದರೆ ಅಷ್ಟಾಗುತ್ತದೆ. ಆ ಪ್ರತಿಯೊಂದು ಹಳ್ಳಿಯಲ್ಲಿರತಕ್ಕ ಮನುಷ್ಯನಿಗೆ, ಪ್ರತಿಯೊಂದು ಕುಟುಂಬಕ್ಕೆ ಮತ್ತು ಹನ್ನೊಂದು ಲಕ್ಷ ಅರವತ್ತೈದು ಸಾವಿರ ಪಂಪುಸೆಟ್ಟುಗಳನ್ನಿಟ್ಟು ಕೊಂಡಿರುವ ರೈತರುಗಳಿಗೆ ಇವತ್ತು ತಾವು

ತೊಂದರೆಯನ್ನು ಕೊಡತಕ್ಕ ಕೆಲಸ ಮಾಡಿದ್ದೀರಿ. ಯಾವ ಕಾರಣಕ್ಕಾಗಿ ಆ ಕೆಲಸ ಮಾಡಿದ್ದೀರಿ? ಇದು ಕೇವಲ ಸೇಡಿನ ಪ್ರವೃತ್ತಿಯಾಗಿದೆ. ಈ ಜನರು ಬದಲಾವಣೆಯಾಗುತ್ತಿದ್ದಾರೆಂದು ನನಗನ್ನಿಸುತ್ತಿದೆ. ಈ ರೀತಿ ಬದಲಾವಣೆಯಿಂದ ತಮ್ಮ ಪಕ್ಷಕ್ಕೆ ಬೆಂಬಲ ಸಿಗುತ್ತಿಲ್ಲವೆಂದು ತಿಳಿದುಕೊಂಡು ಆ ಜನರಿಗೆ ಅದಷ್ಟು ಹೆಚ್ಚುತೆರಿಗೆಯನ್ನು ಹಾಕಿ ನಾವು ಹೋಗೋಣವೆಂದು ತಾವು ಈ ರೀತಿ ಮಾಡುತ್ತಿದ್ದೀರೆಂದು ನನಗನ್ನಿಸುತ್ತಿದೆ. ಮುಖ್ಯಮಂತ್ರಿಯವರು ಯಾವ ಹಿನ್ನೆಲೆಯಿಂದ ಬಂದಿದ್ದಾರೆ? ಅವರು ನಾನು ರೈತರ ವರ್ಗದಿಂದ ಬಂದಿದ್ದೇನೆ, ಬಡವರ ಬಗ್ಗೆ ಅನುಕಂಪವಿದ್ದು ಸಮಾಜವಾದಿ ತತ್ವದಲ್ಲಿ ಹುಟ್ಟಿ ಬೆಳೆದು ಅದರಲ್ಲೇಪಳಗಿ ಬಂದಿದ್ದೇನೆಂದು ಹೇಳಿದ್ದಾರೆ. ಆ ರೀತಿ ಹೇಳತಕ್ಕ ವ್ಯಕ್ತಿ ಇವತ್ತಿನ ದಿವಸ ಈ ರೀತಿ ತೆರಿಗೆಯನ್ನು ಹೆಚ್ಚು ಮಾಡುವುದನ್ನು ನೋಡಿದರೆ ನಿಜವಾಗಿಯೂ ಇವರು ಕ್ಯಾಪಿಟಲಿಸ್ಟ್ ಅವತಾರವನ್ನು ಸೋಷಿಯಾಲಿಸ್ಟ್ ರೂಪದಲ್ಲಿ ತೋರಿಸುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. 'ಮುಖೆ ಮೇ ರಾಮ್ ಬಗಲ್ ಮೇ ಚೂರಿ' ಎನ್ನುವಂತೆ ಇವರ ಕೆಲಸ. ಬಾಯಿಯಲ್ಲಿ ರಾಮ್‌ರಾಮ್ ಎಂದು ಹೇಳುವುದು ಆದರೆ ಬಗಲ್‌ನಲ್ಲಿ ಚೂರಿಯನ್ನು ಇಟ್ಟುಕೊಂಡು ಯಾವ ಜನತೆ ಇವರ ಮೇಲೆ ವಿಶ್ವಾಸವನ್ನಿಟ್ಟುಕೊಂಡು ಇವರಿಗೆ ಸಹಾಯ ಮಾಡಿದರೋ , ಇವರ ಸರ್ಕಾರವನ್ನು ಅಧಿಕಾರಕ್ಕೆ ತಂದರೋ ಅಂಥ ಜನರಿಗೆ ಇವತ್ತು ಇವರು ಬೆನ್ನಿನಲ್ಲಿ ಚೂರಿ ಹಾಕಿ ರಾಜ್ಯವನ್ನು ಆಳಬೇಕೆಂದು ವಿದೇಶದಲ್ಲಿ ಮಜಾಮಾಡಿಕೊಂಡು, ಮಸಾಜ್ ಮಾಡಿಕೊಂಡು, ಅಡ್ಡಾಡಿಕೊಂಡುಆರಾಮವಾಗಿ ಕುಳಿತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೇ, ತಾವು ಆ ರೀತಿ ಹೇಳಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ನಾನು ಆ ರೀತಿ ಹೇಳಲೇಬೇಕಾಗುತ್ತದೆ. ತಾವು ಅಧಿಕಾರವನ್ನು ದುರುಪಯೋಗ ಮಾಡಿಕೊಂಡು; ಜಿಂದಾಲ್‌ನಲ್ಲಿ ತಾವು ಏನು ಮಾಡಿಕೊಂಡಿರಿ?

(ಗೊಂದಲ)

ಉಪಾಧ್ಯಕ್ಷರು : ಅವರೇನು ಮಾತನಾಡುತ್ತಾರೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಲ್ಡ್ ಆಗಲು ತಯಾರಾಗಿಲ್ಲ.

ಮಸಾಜ್ ಎನ್ನತಕ್ಕದ್ದು ಅನ್‌ಪಾರ್ಲಿಮೆಂಟರಿ ವರ್ಡ್ ಅಲ್ಲ. ಅದುಕೆಟ್ಟ ಶಬ್ದವಲ್ಲ

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ತಮಗೆ ಸರ್ಕಾರದ ಬಗ್ಗೆ ಟೀಕೆ ಟಿಪ್ಪಣಿ ಮಾಡುವ ಅಧಿಕಾರವಿದೆ. ಅದು ಅವರ ಜವಾಬ್ದಾರಿ. ಆ ಕೆಲಸವನ್ನು ಅವರು ಮಾಡಲಿ. ಅದನ್ನು ನಾವು ಸಮಾಧಾನದಿಂದ ಕೇಳುತ್ತಿದ್ದೇವೆ. ಆದರೆ ತಾವು ಮಾತನಾಡುವಾಗ ಹೊರದೇಶಕ್ಕೆ ಮಸಾಜ್ ಮಾಡಿಸಿಕೊಳ್ಳುವುದಕ್ಕೆ ಹೋಗಿದ್ದರು ಎಂದು ಹೇಳುವುದು ಸರಿಯಲ್ಲ ತಮ್ಮ ಸ್ಥಾನಕ್ಕೆ ಅದರಿಂದ ಗೌರವ ಬರುವುದಿಲ್ಲ. ಇನ್ನು ಮುಂದೆ ತಮ್ಮ ತೀರ್ಮಾನಕ್ಕೆ ಬಿಟ್ಟುಕೊಡುವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಸಮಾಜವಾದ ತತ್ವದ ಆಧಾರದಿಂದ ಬಂದವರು, ಇವತ್ತು ಜೆ. ಹೆಚ್. ಪಟೇಲರು ಅಧಿಕಾರಕ್ಕೆ ಬಂದರೆಎಂಥ ಸರ್ಕಾರ ಕೊಡಬಹುದು, ಯಾವ ತತ್ವವನ್ನು ತನ್ನ ಆಡಳಿತದಲ್ಲಿ ಅನುಸರಿಸಿ ಜನರಿಗೆಸಹಾಯ ಮಾಡಬಹುದು ಎನ್ನತಕ್ಕ ಭಾವನೆ ಇರುತ್ತದೆ. ಇಂಥವರು ಅಧಿಕಾರಕ್ಕೆ ಬಂದಾಗ ಲ್ಯಾಂಡ್ ರಿಫಾರ್ಮ್ ಆಕ್ಟ್‌ನ್ನು ಬಹಳ ಸ್ಟ್ರಿಕ್ಟ್ ಆಗಿ ಜಾರಿಗೆ ತರುತ್ತಾರೆ, ಇರತಕ್ಕ ಭೂಮಿಯನ್ನು ಬಡವರಿಗೆ ಹಂಚುತ್ತಾರೆ ಎನ್ನತಕ್ಕ ಭಾವನೆ ಇರುತ್ತದೆ. ಏಕೆಂದರೆ ಅದು ತಮ್ಮ ಪ್ರತಿಪಾದನೆ, ಅದರ ಬಗ್ಗೆ ಚರ್ಚೆ ಮಾಡಿಕೊಂಡು ಸುಮಾರು ಹತ್ತಾರು ವರ್ಷ ರಾಜಕಾರಣದಲ್ಲಿ ಅವರ ಹೆಸರನ್ನು ಹೇಳಿ ಬದುಕಿದ್ದೀರಿ ಆದರೆ ತಾವು ಮಾಡಿದ್ದೇನು? ಯಾವ ರೈತರ ಹೆಸರನ್ನು ಹೇಳಿ ಅಧಿಕಾರಕ್ಕೆ ಬಂದಿರೋ, ಮೊನ್ನೆ ತಾನೆ ಪರ್‌ಹಾರ್ಸ್ ಪವರ್ 300ರೂ. ಹಾಕಿದ್ದಿರಿ ಅದಕ್ಕೆ ನಾವು ಹೋರಾಟ ಮಾಡಿದಮೇಲೆ ಅದಕ್ಕೆ ಒಪ್ಪಿ ತಾವು ಅದನ್ನು 100 ರೂ.ಗೆ ತಂದಿರಿ. ಆ ರೀತಿ ಮಾಡಿದ್ದು ತಮಗೆ ಗೊತ್ತಿದ್ದರೂ ಸಹ ಮತ್ತೆ ಮೂರು ತಿಂಗಳ ಒಳಗಾಗಿ ಮತ್ತೆ ಅದನ್ನು 300 ರೂಪಾಯಿ ಮಾಡುತ್ತಿದ್ದೀರಿ, ಅದಲ್ಲದೆ ಪ್ರತಿಯೊಂದು ಯೂನಿಟ್‌ಗೆ ಒಂದು ರೂಪಾಯಿಗಳಂತೆ ಏರಿಸುತ್ತಿದ್ದೀರಿ. ಇದೆಲ್ಲಾ ಏನು ತೋರಿಸುತ್ತಿದೆಯೆಂದರೆ ನಿಮ್ಮ ಫಿಲಾಸಫಿಯೇ ಒಂದು ಪ್ರಾಕ್ಟೀಸ್ ಒಂದು ಹೇಳುವುದೇ ಒಂದು ಮಾಡುವುದು ಮತ್ತೊಂದು ಇದಕ್ಕೇನು ನಾವು ಹೇಳಬೇಕು. ಜಿಂದಾಲ್‌ಗೆ ಹೋಗಿ ಮಸಾಜ್ ಮಾಡಿಕೊಳ್ಳುತ್ತೀರಿ ಎಂದಿದ್ದಕ್ಕೆ ನಿಮಗೆ ಸಿಟ್ಟು ಬಂತು. ಅವರ ಜಾಗದಲ್ಲಿ ಮತ್ತಾರಾದರು ಇದ್ದರೆ ನಾನು ಆ ರೀತಿ ಹೇಳುತ್ತಿರಲಿಲ್ಲ. ಉದಾಹರಣೆಗೆ, ಕ್ಯಾಪಿಟಲಿಸ್ಟಿಕ್ ಬ್ಯಾಕ್ ಗ್ರೌಂಡ್‌ನಿಂದ ಬಂದು ಅದೇ ತತ್ವವನ್ನು ಪರಿಪಾಲನೆ ಮಾಡಿದ್ದರೆ ನಾನು ವಿಚಾರದಾರೆ ಅದು ಇದೆ, ಅವರು ಪ್ರೋ ಲ್ಯಾಂಡ್ ಲಾರ್ಡ್ ಇದ್ದಾರೆ, ಪ್ರೋ ರಿಚ್ ಪೀಪಲ್ ಇದ್ದಾರೆ, ಪ್ರೋ ಲಿಬ್ರಲೈಜೇಷನ್ ಪಾಲಿಸಿಯವರಾಗಿದ್ದರೆಂದು ಹೇಳುತ್ತಿದ್ದೆ. ಆದರೆ ತಾವು ಮಾಡಿದ್ದೇನು,

ಸತತವಾಗಿ 45 ವರ್ಷ ಭೂ ಸುಧಾರಣೆಯ ಪರವಾಗಿ ಯಾರಿಗೆ ಭೂಮಿ ಇಲ್ಲ ಅವರಿಗೆಭೂಮಿ ಕೊಡಬೇಕು ಎನ್ನುವುದರ ಪರವಾಗಿ, ರೈತರ ಪರವಾಗಿ, ಖಾಸಗೀಕರಣವಾಗಬಾರದು, ಸಾರ್ವಜನಿಕ ಕ್ಷೇತದಲ್ಲಿ ಇದು ಇರಬೇಕು ಜಾಯಿಂಟ್ ಸೆಕ್ಟಾರ್‌ನಲ್ಲಿ ಇರಬೇಕು ಎಂದು ಲೋಹಿಯಾರವರ ತತ್ವವನ್ನು ಹೇಳಿಕೊಂಡು ಅಧಿಕಾರಕ್ಕೆ ಬಂದಿರಲ್ಲಾ ಆ ರೀತಿ ಅಧಿಕಾರಕ್ಕೆ ಬಂದಮೇಲೆ ಲೋಹಿಯಾರವರ ತತ್ವ ಎಲ್ಲಿಹೋಯಿತು? ಅವರ ಸಮಾಜವಾದ ತತ್ವವೆಲ್ಲಿ ಹೋಯಿತು? ಬಡವರಿಗೆ ಸಹಾಯ ಮಾಡತಕ್ಕ ಕಳಕಳಿ ಎಲ್ಲಿ ಹೋಯಿತು? ರೈತರಿಗೆಸಹಾಯ ಮಾಡತಕ್ಕ ಇಚ್ಛೆ ಎಲ್ಲಿ ಹೋಯಿತು? ಅದರ ಬಗ್ಗೆ ತಾವು ಹೇಳಿ. ಒಬ್ಬ ಮನುಷ್ಯ ಬಡವರಿಗೆ ಸಹಾಯ ಮಾಡಬೇಕೆಂದರೆ ಬೇರೆ ಫೀಲ್ಡ್‌ನಲ್ಲಿ ಕೈ ಹಾಕುತ್ತಾನೆ. ಹಣವೆಲ್ಲಿ ಸಿಗುತ್ತದೆಂದರೆ, ಅಬ್ಕಾರಿಯಲ್ಲಿ ಹೆಚ್ಚಿನ ಹಣ ಸಿಗುತ್ತಿತ್ತು, ಬಾಟ್ಲಿಂಗ್ ಏಕೆ ಮುಂದುವರೆಸಿದಿರಿ? ಹರಾಜು ಮಾಡದೇ ಅದೇಗುತ್ತಿಗೆದಾರರನ್ನು ಮುಂದುವರೆಸಿದಿರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ನಾವು ಹೇಳುವ ತತ್ವ ಒಂದು ಮಾಡುವುದು ಮತ್ತೊಂದು, ನಮ್ಮ ಸರ್ಕಾರ ನಾಯಕರು ಬಡವರ ವಿರೋಧಿ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ನಮ್ಮ ತಕರಾರೇನಿಲ್ಲ. ಅವರಿಗೆಟೀಕೆ ಮಾಡುವ ಅಧಿಕಾರವಿದೆ. ನಮ್ಮ ತಕರಾರೇನೆಂದರೆ ನಾವು ಮತ್ತು ದೇಶಪಾಂಡೆಯವರು ವಿದೇಶಕ್ಕೆ ಹೋಗಿದ್ದೆವು, ಏನೇನೋ ಮಾಡಿಸಿಕೊಂಡರು ಎನ್ನತಕ್ಕ ಅರ್ಥದಲ್ಲಿ ಅವರೇನು ಮಾತನಾಡಿದ್ದಾರೆ ಅದು ಅವರು ಕುಳಿತುಕೊಂಡಿರತಕ್ಕ ಸ್ಥಾನಕ್ಕೆ ಸರಿಯಿಲ್ಲವೆಂದು ಹೇಳುತ್ತಿದ್ದೇನೆ. ಇವರೇನು ಅಬ್ಕಾರಿಯ ಬಗ್ಗೆ ಹೇಳುತ್ತಿದ್ದಾರೆ ನಾವು ಅಭ್ಕಾರಿಯ ಬಗ್ಗೆ ಕಾರ್ಯಪ್ರವೃತ್ತರಾಗಿದ್ದೇವೆ. ಬಜೆಟ್‌ನಲ್ಲಿ ಅದರ ಬಗ್ಗೆ ಮೊದಲ ಬಾರಿಗೆ ಹೇಳಿದ್ದೇರೆ. ವಿರೋಧ ಪಕ್ಷದ ನಾಯಕರು ತಪ್ಪು ಮಾಹಿತಿಯನ್ನಿಟ್ಟುಕೊಂಡು ಮಾತನಾಡಬಾರದು ಎಂದು ಈ ವಿಚಾರವನ್ನು ಹೇಳುತ್ತಿದ್ದೇನೆ. ಹಣಕಾಸು ಸಚಿವರು ಬಜೆಟ್ ಭಾಷಣದಲ್ಲೇ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಸಾರಾಯಿ ಮಾರಾಟವನ್ನು ಹಂತ ಹಂತವಾಗಿ ಕಡಿಮೆ ಮಾಡಬೇಕು ಎನ್ನತಕ್ಕ ಉದ್ದೇಶವನ್ನು ಇಟ್ಟುಕೊಂಡಿರುವುದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಸ್ವಲ್ಪ ಕಡಿಮೆಯಾಗುತ್ತದೆ, ಎಂದು ಬಜೆಟ್‌ನಲ್ಲಿ ಹೇಳಲಾಗಿದೆ. ಅದರ ಜೊತೆಗೆ ಮುಂದಿನ ಮೂರು ತಿಂಗಳುಗಳೇನಿದೆ ಅದನ್ನು ಹರಾಜಿನ ಮೂಲಕವೇ ಮಾಡುತ್ತಿದ್ದೇವೆ, ಹರಾಜು ಪ್ರಕ್ರಿಯೇ ಈಗಾಗಲೇ ನಡೆದಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಹೋದ ಅಧಿವೇಶನದಲ್ಲಿ ಹಿರಿಯ ಸಚಿವರಾದ ಸಿಂಧ್ಯರವರು ಇದ್ದರು. ತಾವು ವಿಷಯಾಂತರ ಮಾಡಿದರೂ ಸಹ ನಾವು ಮಾಡುವುದಕ್ಕೆ ಹೋಗುವುದಿಲ್ಲ. ಪೇಜಾವರದ ಶ್ರೀಗಳು ಮತ್ತು ತರಳಬಾಳು

ಜಗದ್ಗುರುಗಳು ಜೊತೆಗೆ ನಾವೆಲ್ಲಾ ಪ್ರತಿಪಕ್ಷದವರು ಮಾತುಕತೆಗೆ ಹೋದಾಗ ಸರ್ಕಾರದ ಪ್ರತಿನಿಧಿಗಳು ಬಂದು, ಮಾತುಕತೆಯಾಗಿ, ಸಾರಾಯಿಯನ್ನು ರದ್ದು ಮಾಡುವುದಕ್ಕೆ ಒಪ್ಪಿಕೊಂಡು ಸದನದಲ್ಲಿ ಅದಕ್ಕೆ ಒಪ್ಪಿಗೆಯನ್ನು ಕೊಟ್ಟರೆ ಆಭ್ಯಂತರವಿಲ್ಲವೆಂದು ಅದಕ್ಕಾಗಿ ಒಂದು ವಿಶೇಷ ಅಧಿವೇಶನವನ್ನು ಕರೆಯಲಿಲ್ಲ ಇದು ಮೊದಲನೆಯದು. ಎರಡನೆಯದಾಗಿ, ಸಾರಾಯಿ ಮಾರಾಟವು ಮೊದಲಿನಿಂದಲು ಹರಾಜಿನ ಮೂಲಕವೇ ಆಗುತ್ತಿದೆ, ಈಗ ಅದರಲ್ಲೇನಿದೆ ವಿಶೇಷತೆ? ಅದು ಉಪಕಾರ ಮಾಡಿದಂತಾಗುತ್ತದೆಯೇ? ಅದು ಒಂದು ವ್ಯವಹಾರ. ಪ್ರತಿಜೂನ್ ತಿಂಗಳಿನಲ್ಲಿ ಹರಾಜಾಗುತ್ತದೆ, ಯಾರು ಹೆಚ್ಚಿಗೆಬಿಡ್ಡ್ ಮಾಡುತ್ತಾರೋ ಅವರಿಗೆ ಕೊಡುತ್ತಿದ್ದಿರಿ. ಹೋದ ವರ್ಷ ತಾವು ಅದರಲ್ಲಿ ಶಾಮೀಲಾಗಿದ್ದಿರಿ ಎಂದರೆ ತಮಗೆ ಸಿಟ್ಟು ಬರುತ್ತದೆ. ತಮ್ಮ ಮನಸ್ಸಿಗೆ ಅದು ಗೊತ್ತಿದೆ. ತಾವು ಅದಕ್ಕೆ ಅನಿವಾರ್ಯವಾಗಿ ಬೆಂಬಲ ಕೊಡಬೇಕು ಅದನ್ನು ಕೊಡಿ. ಹೋದ ಸಲ ಸಾರಾಯಿ ಹರಾಜನ್ನು ಮಾಡಿಲಿಲ್ಲ. ಹಂತ ಹಂತವಾಗಿ ಸಾರಾಯಿ ನಿಷೇಧವನ್ನು ತರಬೇಕು ಆದ್ದರಿಂದ ಹರಾಜು ಮಾಡಿಲಿಲ್ಲವೆಂದು ಇಲ್ಲಿ ಹೇಳಿದಿರಿ. ಆಗ 200 ಕೋಟಿ ಆದಾಯ ಹೋಗಿಬಿಟ್ಟಿತು. ಮತ್ತೆ ಜೂನ್‌ನಲ್ಲಿ ಮಾಡಬೇಕಾದ ಹರಾಜನ್ನು ಮಾಡಲಿಲ್ಲ ಈ ರೀತಿ ಮಾಡಿಕೊಂಡು ಉಪದೇಶವನ್ನು ಹೇಳಿದರೆ ರಾಜ್ಯದ ಜನರ್ಯಾರು ನಂಬುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಿದ್ದು ವಿಚಾರದ ಬಗ್ಗೆ ಮಾನ್ಯ ಸಿಂಧ್ಯರವರು ಗಮನಕೊಟ್ಟಿದ್ದರೆ ಈ ರೀತಿ ಮಧ್ಯಪ್ರವೇಶಿಸಿ ಹೇಳುತ್ತಿರಲಿಲ್ಲ. ನಿಮಗೆ ಎಲ್ಲಿ ಹಣ ಸಂಪಾದನೆ ಮಾಡಬೇಕು ಅಲ್ಲಿಮಾಡಿ, ಆದರೆ ನಮ್ಮ ತತ್ವವನ್ನು ಬಿಡಬೇಡಿ. ಆದರೆ ತಾವುತಮ್ಮ ತತ್ವಗಳಿಗೆ ತಿಲಾಂಜಲಿಕೊಟ್ಟು ಅಬ್ಕಾರಿ ಗುತ್ತಿಗೆದಾರರಿಗೆ ಸಹಾಯ ಮಾಡಲು ಹೋದಿರಿ. ರೈತರ ಬಗ್ಗೆ, ಬಡವರ ಬಗ್ಗೆ ಕಾಳಜಿ ವಹಿಸತಕ್ಕ ತಾವು ಚಿಕ್ಕ ಯೋಜನೆಯಾದ ಭಾಗ್ಯ ಜ್ಯೋತಿಯಲ್ಲೂ ಸಹ ಎರಡು ರೂಪಾಯಿ ಇದ್ದದ್ದನ್ನು 3ರೂ. 50 ಪೈಸೆಗೆ ಇವತ್ತು ಮಾಡುತ್ತಿದ್ದೀರಿ. ಅಂದರೆ ಪ್ರತಿಯೊಂದು ಮನೆಯವನೂ ಸಹ ಒಂದು ರೂ.ಹೆಚ್ಚಾಗಿ ತೊಡಗಿಸಬೇಕು. ಹಾಗಿದ್ದರೆ ಅಲ್ಲೇ ಏಕೆ 200 ಕೋಟಿರೂಪಾಯಿ ಬಿಟ್ಟುಕೊಡುತ್ತೀರಿ? ತಮಗೆ ಬಡವರಮೇಲೆ ನಂಬಿಕೆ ಇದ್ದರೆ, ಸಮಾಜವಾದ ತತ್ವದ ಮೇಲೆ ನಂಬಿಕೆ ಇದ್ದರೆ ತಾವು ಈ ಕೆಲಸವನ್ನು ಮಾಡುತ್ತಿರಲಿಲ್ಲ. ಆದರೆ ತಾವು ಅಧಿಕಾರ ಕೈಗೆ ಬಂದಮೇಲೆ ನಾಟಕವನ್ನು ಮಾಡುತ್ತಿದ್ದೀರೆಂದು ಹೇಳಬೇಕಾಗುತ್ತದೆ. ಅದಕ್ಕೆ ತಾವು ಸಿಟ್ಟುಗೊಳ್ಳಬಾರದು. ಮನುಷ್ಯ ಸೋತಾಗ ಅವನ ನಿಜವಾದ ಸ್ನೇಹಿತ ಯಾರು ಎಂಬುದು ಗೊತ್ತಾಗುತ್ತದೆ. ಆ ರೀತಿ ತಮಗೆ ಅಧಿಕಾರ ಸಿಕ್ಕಿದಾಗ ಅದನ್ನು ಯಾವ ತತ್ವದ ಮೇಲೆ ಚಲಾವಣೆ ಮಾಡುತ್ತೀರಿ ಎಂಬುದು ಗೊತ್ತಾಗುತ್ತದೆ. ಅದಿಕಾರ ಇಲ್ಲದಿದ್ದಾಗ ಸುಮ್ಮನೆ ಭಾಷಣ ಮಾಡುತ್ತೀರಿ. ಉದಾಹರಣೆಗೆ, ಮಾನ್ಯ

ದೇವರಾಜ್ ಅರುಸುರವರು ತಮ್ಮಂತೆಲೋಹಿಯಾರವರ ತತ್ವವನ್ನು ಊರಿನ ತುಂಬಾ ಸಾರಿಕೊಂಡು ಬಂದಿರಲಿಲ್ಲ. ಆದರೆ ಅವರು ಅಧಿಕಾರಕ್ಕೆ ಬಂದು ನಾನು ಲ್ಯಾಂಡ್ ರಿಫಾರ್ಮ್ ಮಾಡುತ್ತೇನೆಂದು ಹೇಳಿದಮೇಲೆ ಸಾವಿರ ಜನರು ಅದನ್ನು ವಿರುದ್ಧ ಮಾಡಿದರು, ಕಲ್ಲನ್ನು ಹೊಡೆದರೂ ಬೈದರೂ ಸಹ, ಆ ಆ್ಯಕ್ಟ್‌ನ್ನು ಸುಟ್ಟರೂ ಸಹ ಅದನ್ನು ಜಾರಿಯಲ್ಲಿ ತಂದೇ ತರುತ್ತೇನೆಂದು ಜಾರಿಗೆ ತಂದರು. ಹಿಂದುಳಿದ ವರ್ಗದ ಅನೇಕ ಮುಖಂಡರು ಬಂದುಹೋದರು, ಆದರೆ ಅರಸುರವರ ಧೈರ್ಯವನ್ನು ಯಾರೂ ಸಹ ಮಾಡಲಿಲ್ಲ. ಅವರು ಹಾವನೂರ್ ಆಯೋಗವನ್ನು ಮಾಡಿ ಆ ವರದಿಯನ್ನು ಜಾರಿಗೆ ತಂದು ಬಡವರಿಗೆ ಸಹಾಯ ಮಾಡುವ ಕೆಲಸ ಮಾಡಿದರು. ಇದು ಲೋಹಿಯಾರ ಮೂಲ ತತ್ವ. ಇದನ್ನು ತಾವು ಆಚರಣೆಯಲ್ಲಿ ತರತಕ್ಕ ಕೆಲಸ ಮಾಡಬೇಕು. ಆ ತತ್ವವನ್ನು 1969 ರಲ್ಲಿ ಊರು ಊರು ಸುತ್ತಿ ಹೇಳಿದರೂ ಸಹ ಅಧಿಕಾರ ಅವರ ಕೈಗೆ ಸಿಕ್ಕಿದಾಗ ಅದನ್ನು ಮಾಡಿತೋರಿಸಬೇಕು. ಆದರೆ ತಮ್ಮ ಕಾರ್ಯಕ್ರಮಗಳೇನಿದೆ? ಯಾವುದೂ ಇಲ್ಲ. ಇವತ್ತು ಕೆ.ಇ.ಬಿ. ಎಲ್ಲಿ ಏನುಮಾಡಿದ್ದೀರೆಂದರೆ, ಹೋದ ವರ್ಷ 420 ಕೋಟಿ ಹೆಚ್ಚು ಹೊರೆಯನ್ನು ಮಾಡಿದಿರಿ, ಈ ವರ್ಷ ಸುಮಾರು 390 ಕೋಟಿ ಹೆಚ್ಚು ಮಾಡಿದ್ದೀರಿ. ದರದಲ್ಲಿ ಹೆಚ್ಚಳ ಮಾಡಿದ್ದೀರಿ. ಅಂದರೆ ಸುಮಾರು ಎಂಟು ತಿಂಗಳಿನಲ್ಲಿ 810 ಕೋಟಿರೂಪಾಯಿ ಆದಾಯ ಕೆಇಬಿ ಗೆ ಬರಬೇಕು ಎನ್ನುತಕ್ಕ ದೃಷ್ಟಿಯಿಂದ ತಾವು ಈ ಎಲ್ಲಾ ಟ್ಯಾರೀಫ್‌ನ್ನು ಬದಲಾವಣೆ ಮಾಡಿದ್ದೀರಿ. ಈ ರೀತಿ ಜುಲೈನಿಂದ ಬೆಲೆ ಹೆಚ್ಚಳ ಮಾಡಲು ತಾವು ಕಾರಣಗಳನ್ನು ಕೊಟ್ಟಿದ್ದೀರಿ. ತಾವು ಏನು ಕಾರಣಗಳನ್ನು ಕೊಟ್ಟಿದ್ದೀರಿ. ತಾವು ಏನು ಕಾರಣ ಕೊಟ್ಟಿದ್ದೀರೆಂದರೆ, ಮೊದಲನೆಯದಾಗಿ

"Electricity tariffs sere last revised in July 1996. The Additional resource mobilisation aobut Rs. 420/- Crores expected was not fully realised. There is a shortfall of about 70 Crores. Due to non-availability of adequate quantity of power, the Cost of power projects went up sharply for the following reasons :

a) Greater quantum of Thermal power had to be purchased from KPCL. Central Generating Stations and M.S.E.B., due to failure of Monsoon for the Second consecutive year and to meet the overall energy shortage. ಆದ್ದರಿಂದ ಓವರಾಲ್ ವಿದ್ಯುತ್ ಕೊರತೆ ಇದೆ ಅದನ್ನು ಭರ್ತಿ ಮಾಡಿಕೊಳ್ಳುವುದಕ್ಕೋಸ್ಕರ ಮತ್ತು ಕರ್ನಾಟಕ ಪವರ್ ಕಾರ್ಪೋರೇಷನ್‌ನ

ಮೂಲಕ ವಿದ್ಯುತ್‌ನ್ನು ಖರೀದಿ ಮಾಡುವುದರಿಂದ, ಕೇಂದ್ರೀಯ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದಲೂ ಸಹ ವಿದ್ಯುತ್‌ನ್ನು ತೆಗೆದುಕೊಳ್ಳುವುದರಿಂದ ಇವತ್ತಿನದಿವಸ ಈ ದರಗಳನ್ನು ಜಾಸ್ತಿ ಮಾಡಬೇಕಾಗಿದೆಯೆಂದು ಹೇಳಿದ್ದೀರಿ. ಎರಡನೆಯದಾಗಿ Secondly the cost of power of MAPP has gone up by 65%

65 ಪರ್‌ಸೆಂಟ್ ಎಂ.ಎ.ಪಿ.ಪಿ. ನ ಕಾಸ್ಟ್ ಜಾಸ್ತಿಯಾಗಿದೆ ಅದಕ್ಕಾಗಿ ನಾವು ದರವನ್ನು ಏರಿಸಬೇಕೆಂದು ಹೇಳಿದ್ದೀರಿ. ಮೂರನೆಯದಾಗಿ, Coal cost has gone up very sharply due to the reason of de-control and increase in the Railway fare. ಈ ಮೂರು ಕಾರಣಕ್ಕಾಗಿ ನಾವು ದರವನ್ನು ಏರಿಸುತ್ತಿದ್ದೆವೆಂದು ಹೇಳಿದ್ದೀರಿ. ಹೋದ ಅಧಿವೇಶನದಲ್ಲಿ ಈ ರೀತಿ ವಿದ್ಯುತ್ ದರವನ್ನು ಏರಿಸಿರುವುದು ಸರಿಯಿಲ್ಲವೆಂದು ಎಲ್ಲಾ ಸದಸ್ಯರು ಧರಣಿ ಮಾಡಿದ ಮೇಲು ಕೇವಲ ಮೂರು ತಿಂಗಳ ಅವಧಿಯಲ್ಲಿ ಈ ಕಾರಣಗಳನ್ನು ಕೊಟ್ಟು ಮತ್ತೆ ವಿದ್ಯುತ್ ದರವನ್ನು ಹೆಚ್ಚು ಮಾಡುವ ಪ್ರಯತ್ನವನ್ನು ಮಾಡಿದ್ದೀರಿ. ಹೋದ ಸಲ ಯಾವ ರೀತಿಯಲ್ಲಿ ಬೆಲೆ ಜಾಸ್ತಿ ಮಾಡಿದರು ಈ ಸಲ ಯಾವ ರೀತಿ ಬದಲಾವಣೆ ಮಾಡಿದ್ದಾರೆ ಎಂಬ ಬಗ್ಗೆ ತಮಗೆ ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್‌ನ್ನು ಕೊಡುತ್ತೇನೆ. ಭಾಗ್ಯ ಜ್ಯೋತಿ ಮತ್ತು ಕುಠೀರ ಜ್ಯೋತಿಯ ಬಗ್ಗೆ ಹೇಳುವುದಾದರೆ, 1993ರಲ್ಲಿ ಫಿಕ್ಸ್‌ಡ್ ಜಾರ್ಜ್‌ಸ್ 2 ರೂ. 50 ಪೈಸೆ ಇತ್ತು. 1996 ರಲ್ಲಿ ಫಿಕ್ಸೆಡ್ ಜಾರ್ಜ್‌ಸ್ 2 ರೂ. 50 ಪೈಸೆ, ಅದರ ಮೇಲೆ ತಿಂಗಳಿಗೆ 10 ರೂ. ಎಂದು ಮಾಡಿದರು. ಅಂದರೆ ಫಿಕ್ಸ್‌ಡ್ 2 ರೂ. 50 ಪೈಸೆ ಅದರ ಮೇಲೆ 10 ರೂಪಾಯಿಗಳು. ಈಗ 2 ರೂ. 50 ಪೈಸೆ ಇದ್ದದನ್ನು 3 ರೂ. 50 ಪೈಸೆ ಮಾಡಿದ್ದಾರೆ, ಅಂದರೆ ಬಡವರಿಗೆ ಒಂದು ರೂಪಾಯಿ ಜಾಸ್ತಿ ಮಾಡಿದ್ದಾರೆ. ಡೊಮ್ಯಾಸ್ಟಿಕ್ ಲೈಟಿಂಗ್ ಅಂಡ್ ಇನ್‌ಸ್ಟಲೇಷನ್‌ಗೆ 1993ರಲ್ಲಿ ಫಿಕ್ಸ್‌ಡ್ ಜಾರ್ಜ್‌ಸ್ 10 ರೂ. ಎರಡು ತಿಂಗಳಿಗೆ ಇತ್ತು. ಅನಂತರ 50 ಯೂನಿಟ್‌ಗಳ ಒಳಗೆ ಇರತಕ್ಕದಕ್ಕೆ 55 ಪೈಸೆ. 51 ರಿಂದ 100 ಯೂನಿಟ್‌ವರೆಗೆ65 ಪೈಸೆ. ಅದನ್ನು 1996ರಲ್ಲಿ 50 ಯೂನಿಟ್‌ರವರೆಗೆ ಇದ್ದರೆ 70 ಪೈಸೆ, 51 ರಿಂದ 100 ಯೂನಿಟ್‌ವರೆಗೆ ಉಪಯೋಗ ಮಾಡಿದರೆ 85 ಪೈಸೆ ಮಾಡಿದಿರಿ.

1.10 ಪಿ.ಎಂ

ಆದರೆ ಅದನ್ನು ಈಗ ಎಷ್ಟು ಮಾಡಿದ್ದೀರಿ ಅಂದರೆ ಒಂದು ಕ್ಯಾಟಗರಿಯನ್ನು ನೀವು ಡಿಲಿಟ್ ಮಾಡಿ 100 ಯೂನಿಟ್ ಕನ್‌ಸ್ಯೂಮ್ ಮಾಡಿದ್ದರೆ ಪ್ರತಿ ಯೂನಿಟ್‌ವೊಂದಕ್ಕೆ 90 ಪೈಸೆ ಎಂದು ಮಾಡಿದ್ದೀರಿ. ಅಂದರೆ ಮೊದಲು55 ಪೈಸೆ ಇತು. ಅದನ್ನು ಈಗ 90

ಪೈಸೆಗೆ ಏರಿಸಿದ್ದೀರಿ. ಆದರೆ ಜುಲೈನಲ್ಲಿ ಅದನ್ನು 70 ಪೈಸೆ ಮಾಡಿದಿರಿ. ಅಂದರೆ 20 ಪೈಸೆ ಹೆಚ್ಚಾಯಿತು. ಶೇಕಡ 22ಕ್ಕಿಂತ ಜಾಸ್ತಿ ಇದರಲ್ಲಿ ಹೆಚ್ಚಳವಾಗಿದೆ. ಅದೇ ರೀತಿಯಾಗಿ 300-400 ಯೂನಿಟ್‌ಗಳವರೆಗೆ ಯೂನಿಟ್‌ವೊಂದಕ್ಕೆ ದರ 2.55 ರೂ. ಮಾಡಿದ್ದೀರಿ. ಮೊದಲು ಆರು ತಿಂಗಳ ಹಿಂದೆ ಈ ದರ 1.25 ರೂ. ಇತ್ತು. ಈಗ ಒಟ್ಟಾರೆ 1.25 ರೂ. ಹೆಚ್ಚಾಗಿದೆ. ಅಂದರೆ ಇಲ್ಲಿ ಶೇಕಡ 100ರಷ್ಟು ಹೆಚ್ಚಾಗಿದೆ. ಡೊಮೆಸ್ಟಿಕ್ ಲೈಟಿಂಗ್‌ನಲ್ಲೇ ಯಾರು 300-400 ಯೂನಿಟ್‌ಗಳವರೆಗೆ ಖರ್ಚು ಮಾಡುತ್ತಾರೋ ಅವರಿಗೆ ಇವತ್ತಿನ ದಿವಸ ಸುಮಾರು 1.25 ರೂ. ಪ್ರತಿ ಯೂನಿಟ್‌ಗೆ ಹೆಚ್ಚಳ ಮಾಡಿದ್ದೀರಿ. ಹೀಗೆ ಪ್ರತಿಯೊಂದರಲ್ಲಿ ತಾವು ಹೆಚ್ಚಿಗೆ ಮಾಡಿದ್ದೀರಿ. ಹೀಗೆ ಪ್ರತಿಯೊಂದರಲ್ಲಿ ತಾವು ಹೆಚ್ಚಿಗೆ ಮಾಡಿದ್ದೀರಿ. ನಾನ್ ಡೊಮೆಸ್ಟಿಕ್‌ಅಂಡ್ ನಾನ್ ಕಮರ್ಷಿಯಲ್ ಲೈಟಿಂಗ್‌ನಲ್ಲಿ ಎಷ್ಟು ಮಾಡಿದ್ದೀರಿ ಎಂದರೆ, ಹಿಂದೆ ಈ ಕ್ಯಾಟಗರಿ ಇರಲಿಲ್ಲ, ಈಗ ಹೊಸದಾಗಿ ಕ್ಯಾಟಗರಿ ಮಾಡಿ100 ಯೂನಿಟ್‌ಗಳವರೆಗೆ 1 ರೂ. 100-200 ಯೂನಿಟ್‌ಗಳವರೆಗೆ 1.35 ರೂ. 400 ಯೂನಿಟ್‌ಗಳವರೆಗೆ 3.80 ರೂ. ಮಾಡಿದ್ದೀರಿ. ಆ ಲೆಕ್ಕವನ್ನು ಕೂಡ ನಾವು ತೆಗೆದುಕೊಂಡರೆ ಇದರಲ್ಲಿ ಶೇಕಡ 200ರಷ್ಟು ಹೆಚ್ಚಳ ಮಾಡಲಾಗಿದೆ. ಡೊಮೆಸ್ಟಿಕ್ ಕಂಬೈನ್ಡ್ ಲೈಟಿಂಗ್ ಅಂಡ್ ಹೀಟಿಂಗ್‌ನಲ್ಲಿ ಅಂದರೆ ಆಲ್ ಎಲೆಕ್ಟ್ರಿಕ್ ಹೋಮ್‌ನವರಿಗೆ 1996 ರಲ್ಲಿ 200 ಯೂನಿಟ್‌ಗಳವರೆಗೆ 1.30 ರೂ.ಪ್ರತಿ ಯೂನಿಟ್‌ಗೆ ವಿದ್ಯುತ್ ದರ ಇತ್ತು.ಇವತ್ತು ಅದರಲ್ಲಿ ಪ್ರತಿ ಯೂನಿಟ್‌ಗೆ 1.55 ರೂ. ದರ ನಿಗದಿಗೊಳಿಸಿದ್ದೀರಿ. ಅಂದರೆ 25ಪೈಸೆ ಜಾಸ್ತಿಯಾಗಿದೆ. 400 ಯೂನಿಟ್‌ಗಳಿಗಿಂತ ಹೆಚ್ಚು ಕನ್‌ಸ್ಯೂಮ್ ಮಾಡಿದರೆ ಈಗಿನ ದರ ಪ್ರತಿ ಯೂನಿಟ್‌ಗೆ 3.70 ರೂ. ಮಾಡಿದ್ದೀರಿ. ಮೊದಲು ಈ ದರ ಕೇವಲ 2.25 ರೂ.ಮಾತ್ರ ಇತ್ತು. ಅಂದರೆ ಇದರಲ್ಲಿ ಹೆಚ್ಚು ಕಡಿಮೆ 2 ರೂ.ಗಳವರೆಗೆ ಏರಿಕೆಯಾಗಿದೆ. ಪ್ರೈವೇಟ್ ಅಂಡ್ ಅನ್-ಎಡೆಡ್ ಎಜುಕೇಷನಲ್ ಇನ್ಸ್‌ಟಿಟ್ಯೂಟ್‌ಗಳಿಗೂ ಸಹ ಏರಿಕೆ ಮಾಡಿದ್ದೀರಿ. ಸ್ಕೂಲುಗಳು ಮತ್ತು ಆಸ್ಪತ್ರೆಗಳನ್ನೂ ಕೂಡ ಬಿಡದಂತೆ ಎಲ್ಲರಿಗೂ ಅನ್ವಯವಾಗುವಂತೆ ದರ ಏರಿಕೆ ಮಾಡಿದ್ದೀರಿ. 1996ರಲ್ಲಿ ಯಾವುದೇ ಒಂದು ಪ್ರೈಮರಿ ಸ್ಕೂಲಿಗೆ 200 ಯೂನಿಟ್‌ಗಳವರೆಗೆ ಅವರು ಕನ್‌ಸ್ಯೂಮ್ ಮಾಡಿದರೆ ಪ್ರತಿ ಯೂನಿಟ್ಟಿಗೆ 2.50 ರೂ. ದರ ವಿಧಿಸಲಾಗುತ್ತಿತ್ತು. 400 ಯೂನಿಟ್‌ಗಳವರೆಗೆ ಕನ್‌ಸ್ಯೂಮ್ ಮಾಡಿದರೆ 3.75 ರೂ. ದರ ವಿಧಿಸಲಾಗುತ್ತಿತ್ತು. ಆದರೆ ಈಗ ನೀವು ಎಷ್ಟು ಹೆಚ್ಚಳ ಮಾಡಿದ್ದೀರಿ ಎಂದರೆ 200 ಯೂನಿಟ್‌ಗಳವರೆಗೆ 2.75 ರೂ. ಪ್ರತಿ ಯೂನಿಟ್‌ಗೆ ದರ ವಿಧಿಸಿದ್ದೀರಿ. ಅಂದರೆ ಹಿಂದಿಗಿಂತ ಇದು 25 ಪೈಸೆ ಜಾಸ್ತಿಯಾಗಿದೆ. 400 ಯೂನಿಟ್‌ಗಳವರೆಗೆ ಕನ್‌ಸ್ಯೂಮ್ ಮಾಡಿದರೆ ಹಿಂದೆ 3.75 ರೂ. ಇದ್ದರೆ ಈಗ 4.10 ರೂ.ಗೆ ಏರಿಸಿದ್ದೀರಿ.

ಹೀಗೆ ಸ್ಕೂಲುಗಳು, ಹಾಸ್ಟೆಲ್‌ಗಳು ಮತ್ತು ಹಾಸ್ಪಿಟಲ್‌ಗಳಿಗೆ ಸುಮಾರು ಶೇಕಡ 25-60 ರವರೆಗೆ ಬೆಲೆ ಜಾಸ್ತಿ ಮಾಡಿದ್ದೀರಿ. ಅದೇರೀತಿಯಾಗಿಸರ್ಕಾರದವರು ಕುಂಟರು, ಕುರುಡರು ಇವರಿಗೂ ಕೂಡ ಬಿಡಲಿಲ್ಲ. Hostels meant for handicapped Orphans ಕೂಡ ಏನು ಮಾಡಿದ್ದಾರೆ ಅಂದರೆ ಸುಮಾರು ಶೇಕಡ 25-32ರವರೆಗೆ ರೀಟೈನ್ ಮಾಡಿಕೊಂಡಿದ್ದಾರೆ. ಕಮರ್ಷಿಯಲ್ ಲೈಟಿಂಗ್ ಅಲ್ಲಡ್‌ಹೀಟಿಂಗ್ ಕ್ಯಾಟಗರಿಗೆ ಈಗಾಗಲೇ 1996ರಲ್ಲೇ ದರ ಬಹಳ ಜಾಸ್ತಿಯಾಗಿತ್ತು. ಈಗ ಪುನಃ ಅದಕ್ಕೆ ಜಾಸ್ತಿ ಮಾಡಿದ್ದೀರಿ. ಮೊದಲು ಆ ದರ 4.25 ರೂ. ಇತ್ತು. ಈಗ 1997ರಲ್ಲಿ ಅದನ್ನು 4.80 ರೂ.ಗೆ ಹೆಚ್ಚಿಸಿದ್ದಾರೆ. ಅಂದರೆ ಯೂನಿಟ್‌ವೊಂದಕ್ಕೆ 50 ಪೈಸೆ ಹೆಚ್ಚಾಯಿತು. ನೀರಾವರಿ ಪಂಪ್‌ಸೆಟ್‌ಗಳಿಗೆ 100 ರೂ. ದರ ವಿಧಿಸುವುದನ್ನು ನಾವು ಕಳೆದ ಬಾರಿ ಏನೋ ಇದೊಂದು ಸಾರಿ ವಿಧಿಸಿದ್ದಾರೆ ಎಂದು ಒಪ್ಪಿಕೊಂಡಿದ್ದೆವು. ಆದರೆ ಸರ್ಕಾರದವರು ಆರು ತಿಂಗಳಾಗುವುದರೊಳಗೇ ಪುನಃ ಆ ದರವನ್ನು ಹೆಚ್ಚಳ ಮಾಡಿದ್ದಾರೆ. Upto 10 HP Rs. 300/- and more than 10 H.P., 15 Ps. per unit for all the units consumed.

ಅದರ ಮೇಲೆ ಎಷ್ಟೇ ಕನ್‌ಸ್ಯೂಮ್ ಮಾಡಿದರೂ ಕೂಡ ಪರ್ ಹಾರ್ಸ್ ಪವರ್ 400-500 ರೂ.ಗಳು ಆಗಬಹುದು. ಅದು ಎಷ್ಟೇ ಆದರೂ ಅದನ್ನು ಕೊಡಲೇಬೇಕು. ಆದರೆ ಮಿನಿಮಮ್ 300 ರೂ. ಮಾಡಿದ್ದಾರೆ. ಹೀಗೆ ಮೊನ್ನೆ ತಾನೇ ನಾವೆಲ್ಲರೂ ಕೂಡ ಇಲ್ಲಿ ಹೇಳಿದೆವು. ಏನೆಂದರೆ ರಾಜ್ಯದಲ್ಲಿ ಸುಮಾರು 12 ಲಕ್ಷ ಪಂಪ್‌ಸೆಟ್ಸ್ ಇವೆ. ದರ ವಿಧಿಸುವುದರಿಂದ ಆ ರೈತರಿಗೆ ಅನಾನುಕೂಲವಾಗುತ್ತದೆ. 12 ಲಕ್ಷ ಪಂಪ್‌ಸೆಟ್ಸ್ ಅಂದರೆ ಒಬ್ಬರಿಗೆ ಅವರೇಜ್ 3-5 ಎಕರೆ ಜಮೀನನ್ನು ಇಟ್ಟುಕೊಂಡು ಅವರು ನೀರಾವರಿ ಮಾಡಿದರೂ ಕೂಡ, ಇವತ್ತಿನ ದಿವಸ 60-70 ಲಕ್ಷ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಅದಕ್ಕಾಗಿ ತಾವು ಇಷ್ಟೋಂದು ರೈತರ ಮೇಲೆ ಹೊರೆಯನ್ನು ಹಾಕಬೇಡಿ, ಅವರಿಗೆ ನಾವು ಅನುಕೂಲ ಮಾಡಿಕೊಡಬೇಕೇ ಹೊರತಾಗಿ ಅವರಿಗೆ ನಾವು ಅನಾನುಕೂಲ ಮಾಡಿಕೊಡತಕ್ಕಂಥದ್ದು ಸರಿಯಲ್ಲವೆಂದು ನಾವು ಅವತ್ತು ಹೇಳಿದ್ದೆವು. ಈಗ ನಾವು ರೈತರಿಗೆ ಕೊಡತಕ್ಕಂಥ ವಿದ್ಯುಚ್ಛಕ್ತಿಯ ಪೂರೈಕೆಯನ್ನೇ ಸರಿಯಾಗಿ ಮಾಡುತ್ತಿಲ್ಲ. ಒಂದು ಟೈಮಿಂಗ್ ಪ್ರಕಾರ ವಿದ್ಯುಚ್ಛಕ್ತಿ ಪೂರೈಕೆ ಮಾಡುತ್ತಿಲ್ಲ. ವಿದ್ಯುಚ್ಛಕ್ತಿ ಯಾವಾಗ ಬರುತ್ತದೆಯೋ ಯಾವಾಗ ಹೋಗುತ್ತದೆಯೋ ಗೊತ್ತಿಲ್ಲ. ಮಾನ್‌ಸೂನ್ ಏನಾದರೂ ವಿಫಲವಾದರೆಶೇಕಡ 50-70ರಷ್ಟು ವಿದ್ಯುತ್ ಕಡಿತ ಆಗುವುದು ತಮಗೆ ಗೊತ್ತಿದೆ. ವಿದ್ಯುಚ್ಛಕ್ತಿ ಪೂರೈಕೆಮಾಡುವ ಸಮಯವನ್ನೂ ಕೂಡ ಸರ್ಕಾರ ಅನೇಕ ರೀತಿಯಿಂದ ಬದಲಾವಣೆ ಮಾಡಿದೆ. ಕೆಲವರಿಗಂತೂ ರಾತ್ರಿ ವೇಳೆ ವಿದ್ಯುತ್ ಪೂರೈಕೆ ಮಾಡುತ್ತಿದ್ದೀರಿ.ರೈತರು ರಾತ್ರಿ ವೇಳೆ

ತಮ್ಮ ತಮ್ಮ ಹೊಲ ಮತ್ತು ತೋಟಗಳಲ್ಲಿ ಯಾವ ಸಮಯಕ್ಕೆ ವಿದ್ಯುಚ್ಛಕ್ತಿ ಬರುತ್ತದೆಯೋ ನಾವು ಯಾವಾಗ ಇಂಜಿನ್ ಚಾಲೂ ಮಾಡಬೇಕೋ ಎಂದು ಕಾಯುತ್ತಾ ಕುಳಿತುಕೊಳ್ಳಬೇಕಾಗಿದೆ. ನಮ್ಮಲ್ಲಿ ಇಂತಹ ಒಂದು ಪರಿಸ್ಥಿತಿ ಇದೆ. ನಮ್ಮಲ್ಲಿ ವಿದ್ಯುಚ್ಛಕ್ತಿ ಪೂರೈಕೆ ಪರಿಸ್ಥಿತಿಯೂ ಸರಿಯಿಲ್ಲ ಮತ್ತು ನಿರಂತರವಾಗಿ ವಿದ್ಯುತ್ ಪೂರೈಕೆಯಾಗುತ್ತದೆ ಎಂಬ ನಂಬಿಕೆಯೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ತಾವು ತರಾತುರಿಯಲ್ಲಿ, ಸದನ ಇನ್ನು ಒಂದು ತಿಂಗಳಲ್ಲಿ ಇಂತಹ ದಿನ ಸೇರುತ್ತದೆ ಎಂದು ನಿರ್ದಿಷ್ಟವಾಗಿ ಗೊತ್ತಿದ್ದರೂ ಕೂಡ ನೀವು ವಿದ್ಯುತ್ ದರ ಏರಿಸುವ ಈ ತೀರ್ಮಾನವನ್ನು ಏಕಾಏಕಿಯಾಗಿ ತೆಗೆದುಕೊಂಡು ರೈತರಿಗೆ ಅಷ್ಟೇ ಅಲ್ಲ, ಬಡವರಿಗೆ ಹಾಸ್ಟೆಲ್‌ನಲ್ಲಿರತಕ್ಕವರಿಗೆ ಈ ಸರ್ಕಾರ ಮಾಡಿದೆ. ಇವತ್ತು ಸ್ಮಾಲ್ ಸ್ಕೇಲ್‌ಇಂಡಸ್ಟ್ರೀಸ್ ಕೂಡ ಕಂಪ್ಲೀಟ್ ನಾಶವಾಗಿವೆ. ಯಾವ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗಳು ಕೂಡ ಬದುಕಲಿಕ್ಕೆ ಸಾಧ್ಯವಿಲ್ಲದಂತಾಗಿದೆ. ಒಂದು ಕಡೆ ಇಂಡಸ್ಟ್ರೀಸ್ ಬರಬೇಕು, ನಾವು ಸಹಾಯ ಮಾಡುತ್ತೇವೆ ಎಂದು ಹೇಳುತ್ತೀರಿ. ಇನ್ನೊಂದು ಕಡೆ ಅವರ ಮೇಲೆ ಹೆಚ್ಚಿನ ದರವನ್ನು ಹಾಕಿ, ಇವತ್ತು ಅವರು ಬರದೇ ಇರತಕ್ಕಂಥ ರೀತಿಯಲ್ಲಿ ತಾವು ವರ್ತನೆ ಮಾಡುತ್ತಿದ್ದೀರಿ. ತಾವು ವಿದೇಶಿ ಯಾತ್ರೆ ಮಾಡಿದಿರಿ. ನಾನು ಆಗಲೇ ಇದನ್ನು ಹೇಳಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಸಿಟ್ಟು ಬಂದಿತ್ತು. ತಾವು 3-4 ಸಲ ಫಾರಿನ್ ಕಂಟ್ರೀಸ್‌ಗೆ ಏಕೆ ಹೋಗಿದ್ದಿರಿ ಎಂದು ಕೇಳಿದ್ದಕ್ಕೆ ವಿದೇಶಿ ಬಂಡವಾಳ ತರಲು ನಾವು ಹೋಗಿದ್ದೆವು ಎಂದು ಉತ್ತರ ಹೇಳಿದರು ಏನು ಆ ಇನ್‌ವೆಸ್ಟ್‌ಮೆಂಟ್ ತಂದು ಇಲ್ಲಿ ತೊಳೆದುಕೊಂಡು ಕುಡಿಯಬೇಕೇ? ಇಲ್ಲಿ ಎಲೆಕ್ಟ್ರಿಸಿಟಿ ಬರಬೇಕು, ನಾವು ಸಹಾಯ ಮಾಡುತ್ತೇವೆ ಎಂದು ಹೇಳುತ್ತೀರಿ. ಇನ್ನೊಂದು ಕಡೆ ಅವರ ಮೇಲೆ ಹೆಚ್ಚಿನ ದರವನ್ನು ಹಾಕಿ, ಇವತ್ತು ಅವರು ಬರದೇ ಇರತಕ್ಕಂಥ ರೀತಿಯಲ್ಲಿ ತಾವು ವರ್ತನೆ ಮಾಡುತ್ತಿದ್ದೀರಿ. ತಾವು ವಿದೇಶಿ ಯಾತ್ರೆ ಮಾಡಿದಿರಿ. ನಾನು ಆಗಲೇ ಇದನ್ನು ಹೇಳಿದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಿಟ್ಟು ಬಂದಿತ್ತು. ತಾವು 3-4 ಸಲ ಫಾರಿನ್ ಕಂಟ್ರೀಸ್‌ಗೆ ಏಕೆ ಹೋಗಿದ್ದೀರಿ ಎಂದು ಕೇಳಿದ್ದಕ್ಕೆ ವಿದೇಶಿ ಬಂಡವಾಳ ತರಲು ನಾವು ಹೋಗಿದ್ದೆವು ಎಂದು ಉತ್ತರ ಹೇಳಿದರು ಏನು ಆ ಇನ್‌ವೆಸ್ಟ್‌ಮೆಂಟ್ ತಂದು ಇಲ್ಲಿ ತೊಳೆದುಕೊಂಡು ಕುಡಿಯಬೇಕೇ? ಇಲ್ಲಿ ಎಲೆಕ್ಟ್ರಿಸಿಟಿ ಇಲ್ಲ, ಅದನ್ನು ರೆಗ್ಯೂಲರ್‌ಆಗಿ ಸಪ್ಲೈ ಮಾಡುವಂತಿಲ್ಲ, ಒಂದು ರೀಸನಬಲ್ ರೇಟ್‌ನಲ್ಲಿ ಕೊಡುವುದಿಲ್ಲ. ಎಷ್ಟೋ ಸಾರಿ ಮೆಮೋರಂಡಮ್ ಆಫ್ ಅಂಡರ್ ಸ್ಟ್ಯಾಂಡಿಂಗ್ ನೀವು ಏನು ಸೈನು ಮಾಡುತ್ತೀರಿ ಆ ಸಮಯದಲ್ಲಿ ನೀವೇನು ಹೇಳುತ್ತೀರಿ ಎಂದರೆ, ನಾವು ಕೆಲವು ಕಡೆ ಪುಗಸೆಟ್ಟಿ ವಿದ್ಯುತ್ ಕೊಡುತ್ತೇವೆ, ನೀವು ಬನ್ನಿ ಎಂದು ಹೇಳುತ್ತೀರಿ. ಅಥವಾ ರಿಯಾಯಿತಿ ದರದಲ್ಲಿ ವಿದ್ಯುತ್ ಕೊಡುತ್ತೇವೆ ಬನ್ನಿ ಎಂದು ಹೇಳುತ್ತೀರಿ. ಅಥವಾ

ಐದು ವರ್ಷಗಳವರೆಗೆ ನಾವು ನಿಮಗೆ ಕರೆಂಟ್ ಚಾರ್ಜ್ ಮಾಡುವುದಿಲ್ಲ ಎಂದು ಅವರಿಗೆ ಭರವಸೆ ಕೊಡುತ್ತೀರಿ. ಹೀಗಾಗಿ ತಾನೇ ನಮ್ಮ ಬೆಳಗಾವಿಯಲ್ಲಿ ಹಿಂಡಾಲ್-ಗಿಂಡಾಲ್ ಎಲ್ಲಾ ಬಂದಿದ್ದು. ಆಗ ಅವರಿಗೆ ನೀವು ಹೀಗೆಲ್ಲಾ ಎನ್‌ಕ್ರೇಜ್ ಮಾಡಿದಿರಿ. ಈಗ ನೀವೂ ಕೂಡ ಪರದೇಶಕ್ಕೆ ಹೋದ ಮೇಲೆ, ಫಾರಿನ್ ಟ್ರಿಪ್ಸ್ ಮಾಡುವಾಗ ಯಾರಿಂದ ನಿಮಗೆ ಇನ್ವಿಟೇಷನ್ ಬರುತ್ತದೆಯೇ ಇಲ್ಲವೋ ಗೊತ್ತಿಲ್ಲ, ಅವರಿಂದಲೇ ಆಹ್ವಾನ ತರಿಸಿಕೊಂಡು ಹೋಗತಕ್ಕಂಥ ಜನ ಬಹಳ ಇದ್ದಾರೆ. ನೀವೇ ಅಲ್ಲಿಂದ ನಮಗೊಂದು ಆಹ್ವಾನ ಕಳುಹಿಸಿ ಎಂದು ನೀವೇ ಅವರಿಗೆ ಬರೆಯುತ್ತೀರಿ. ನೀವು ಒಂದು ಇನ್ವಿಟೇಷನ್ ಕಳುಹಿಸಿ, ಕರ್ನಾಟಕ ಗೌರ್ನಮೆಂಟ್ ಬಹಳ ಅಬರಲ್ ಇದೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಬಹಳ ಲಿಬರಲ್ ಇದ್ದಾರೆ ಎಂದು ಹೇಳುತ್ತೀರಿ. ಅಲ್ಲಿಂದ ಒಂದು ಇನ್ವಿಟೇಷನ್ ಬೇಡವೇ? ಸುಮ್ಮನೆ ಒಂದು ರೆಕ್ಕಂಡ್ ಮಾಡಿ ಕಳುಹಿಸಿದರೆ ಆಯಿತು. ವಿದೇಶ ಪ್ರಯಾಣದ ಬಗ್ಗೆ ಕೆಲವು ಸಲ ಕೇಂದ್ರ ಸರ್ಕಾರಕ್ಕೂ ಕೂಡ ತಿಳಿಸುವುದಿಲ್ಲ. ಅನೇಕ ಸಲ ಪರ್ಮಿಷನ್ ಬೇಡವೇ? ಸುಮ್ಮನೆ ಒಂದು ರೆಕ್ಕಂಡ್ ಮಾಡಿ ಕಳುಹಿಸಿದರೆ ಆಯಿತು. ವಿದೇಶ ಪ್ರಯಾಣದ ಬಗ್ಗೆ ಕೆಲವು ಸಲ ಕೇಂದ್ರ ಸರ್ಕಾರಕ್ಕೂ ಕೂಡ ತಿಳಿಸುವುದಿಲ್ಲ. ಅನೇಕ ಸಲ ಪರ್ಮಿಷನ್ ಕೂಡ ತೆಗೆದುಕೊಳ್ಳದೇ ಪ್ರೈವೇಟ್ ಟ್ರಿಪ್ ಎಂದು ಹಾಕಿಕೊಂಡು ವಿದೇಶ ಪ್ರಯಾಣ ಮಾಡುತ್ತಿದ್ದೀರಿ. ನೀವು ಇದೇ ರೀತಿಯಾಗಿ ಎಷ್ಟೋ ಪ್ರೈವೇಟ್ ಟೂರ್ ಮಾಡಿಕೊಂಡು ಬಂದಿದ್ದೀರಿ, ಇದು ನಮಗೆ ಗೊತ್ತಿದೆ. ವಿದೇಶ ಪ್ರಯಾಣಕ್ಕೆ ಹೋಗಬೇಕಾದರೆ ನಿಮಗೆ ಫಾರಿನ್ ಮಿನಿಸ್ಟರ್‌ರವರಿಂದ ಕ್ಲಿಯರೆನ್ಸ್ ಬೇಕು. ಇನ್ನು ಪ್ರಾಜೆಕ್ಟ್ ಬಗ್ಗೆ ಮಾತನಾಡಲು ವಿದೇಶ ಪ್ರಯಾಣ ಮಾಡಬೇಕಾದರೆ ನಿಮಗೆ ಏಕನಾಮಿಕ್ ಅಫೇರ್ಸ್ ಮಿನಿಸ್ಟಿರ್ ಕ್ಲಿಯರೆನ್ಸ್ ಬೇಕು. ಫಾರಿನ್ ಅಪೇರ್ಸ್ ಮಿನಿಸ್ಟ್ರಿ ಕ್ಲಿಯರೆನ್ಸ್ ಬೇಕು. ಯಾವ ಪ್ರಾಜೆಕ್ಟ್ ಬಗ್ಗೆ ಮಾತನಾಡಲು ವಿದೇಶ ಪ್ರಯಾಣ ಮಾಡುತ್ತಿದ್ದಾರೆ ಎಂಬ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಇದೆಲ್ಲಾ ಪ್ರೋಸಿಜರ್ ಪಾಲಿಸದೇ ನೇರವಾಗಿ ತಾವೇ ಇನ್ವಿಟೇಷನ್ ಪಡೆದುಕೊಂಡು ಫಾರಿನ್ ಅಫೇರ್ಸ್‌ಮಿನಿಸ್ಟ್ರಿ ಕ್ಲಿಯರೆನ್ಸ್ ಬೇಕು. ಯಾವ ಪ್ರಾಜೆಕ್ಟ್ ಬಗ್ಗೆ ಮಾತನಾಡಲು ವಿದೇಶ ಪ್ರಯಾಣ ಮಾಡುತ್ತಿದ್ದಾರೆ ಎಂಬ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಇದೆಲ್ಲಾ ಪ್ರೊಸೀಜರ್ ಪಾಲಿಸದೇ ನೇರವಾಗಿ ತಾವೇ ಇನ್ವಿಟೇಷನ್ ಪಡೆದುಕೊಂಡು ಫಾರಿನ್ ಪ್ರಯಾಣ ಮಾಡಿದಂತಹವರು ನಿಮ್ಮಲ್ಲಿ ಎಷ್ಟು ಜನ ಇಲ್ಲರೆಂಬುದನ್ನು ಹೇಳಿ ನೋಡೋಣ. ನೀವು ಒಂದು ಲೆಟರ್ ಕಳುಹಿಸಿಬಿಡಿ ನಾವು ಅದನ್ನೇ ಒಂದು ಇನ್ವಿಟೇಷನ್ ಎಂದು ಟ್ರೀಟ್ ಮಾಡಿಕೊಂಡು ಇವತ್ತಿನ ದಿವಸ ಎಷ್ಟೋ ಛೇರ್ಮನ್‌ಗಳು ವಿದೇಶ ಪ್ರವಾಸ ಹೋಗಿದ್ದಾರೆ. ಆಶ್ರಯ ಸ್ಕೀಮ್ ಬಗ್ಗೆ ವಾಷಿಂಗ್‌ಟನ್‌ನಲ್ಲಿ

ನಿಮ್ಮ ಜೊತೆ ಚರ್ಚೆ ಮಾಡುವುದಕ್ಕೆ ಬಂದಿದ್ದಾರೆ. ಆ ಜಾಹೀರಾತನ್ನು ನಾನು ನಿಮಗೆ ತಂದು ತೋರಿಸಲೇ? ನಿಮ್ಮ ಫೋಟೋಗಳನ್ನು ಹಾಕಿಕೊಂಡಿರುವ ಜಾಹೀರಾತನ್ನು ನಾನು ತಂದು ತೋರಿಸಲೇ?

ಶ್ರೀ ಸಿದ್ದರಾಮಯ್ಯ : ಯಾವನೋ ಒಬ್ಬ ಪಾರ್ಟಿ ಅಭಿಮಾನಿ ಅವರಿಗೆಗೊತ್ತಿದ್ದೋ ಗೊತ್ತಿಲ್ಲದೆಯೋ ಅವರ ಫೋಟೋವನ್ನು ಹಾಕಿಸಿಕೊಂಡಿದ್ದರೆ, ನೀವು ಅದನ್ನೇ ಸತ್ಯ ಎಂದು ತಿಳಿದುಕೊಂಡರೆ ನಾವೇನು ಹೇಳುವುದು?

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರು ಅಲ್ಲಿ ಏಕೆ ಬಂದಿದ್ದರು? ಏನು ಮಾಡುತ್ತಿದ್ದರು ಎಂಬುದನ್ನಾದರೂ ಹೇಳಿ. ಅದು ರಾಜ್ಯದ ಜನತೆಗೆ ಗೊತ್ತಾಗಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಲೋಕಾಸ್ಪ್ ಸ್ಕೀಮ್ ಅಲ್ಲಿ ಹೇಗೆ ಆಗುತ್ತಿದೆ ಎಂದು ನೋಡಲಿಕ್ಕೆ ಹೋಗಿದ್ದಾರೆ. ಅವರಿಗೆ ಅಭಿನಂದನೆಗಳು ಎಂದು ಹೇಳಿ ಹೋಗುವಾಗಲೂ ಅಭಿನಂದನೆ, ಬರುವಾಗಲೂ ಅಭಿನಂದನೆ, ತಾವು ಎಷ್ಟು ಟ್ರಿಪ್ ಮಾಡಿದ್ದೀರಿ, ಎಷ್ಟು ಹಣ ಖರ್ಚು ಮಾಡಿದ್ದೀರಿ ಎಷ್ಟು ಇನ್‌ವೆಸ್ಟ್‌ಮೆಂಟ್ ತಂದಿರಿ? ಎಷ್ಟಕ್ಕೆ ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ತೆಗೆದುಕೊಂಡಿದ್ದೀರಿ? ಅದಕ್ಕೆಲ್ಲಾ ತಾವು ವಿವರಣೆ ಕೊಡಿ. ಇವತ್ತು ದೊಡ್ಡ ದೊಡ್ಡ ಇಂಡಸ್ಟ್ರೀಗಳಿಗೆ ತಾವು ಇಲ್ಲಿ ಆಹ್ವಾನ ಕೊಡುತ್ತೀರಿ, ಆಹ್ವಾನ ಕೊಡುವಾಗ ಹಿಂದಿನ ಜನರೇಷನ್ ಎಷ್ಟಿದೆ ಎಂಬುದನ್ನು ನೋಡಬೇಕು. ಈಗ ಇರತಕ್ಕಂಥ ಇಂಡಸ್ಟ್ರೀಗಳಿಗೆ, ಪಂಪ್‌ಸೆಟ್ಟಗಳಿಗೆ, ಗೃಹ ವಿದ್ಯುತ್ ಬಳಕೆದಾರರಿಗೆ ಇವತ್ತಿನ ದಿವಸ ನಾವು ಸರಿಯಾಗಿ ವಿದ್ಯುತ್ ಸಪ್ಲೆ ಮಾಡಬೇಕುಅಂದರೆ ಇನ್ನು ನಮಗೆ 3000-4000 ಮೇಗಾವ್ಯಾಟ್ ವಿದ್ಯುತ್ ಬೇಕು. ಈಗಿರತಕ್ಕಂಥದ್ದು 3470 ಮೆಗಾವ್ಯಾಟ್ ಹೆಚ್ಚು ಕಡಿಮೆ ನಮಲ್ಲಿ ಶೇಕಡ 50 ರಷ್ಟು ವಿದ್ಯುತ್ ಇದೆ. ಇನ್ನು 50ರಷ್ಟು ನಾವು ಉತ್ಪಾದನೆ ಮಾಡಬೇಕು. ಈಗ ಇರತಕ್ಕಂಥವುಗಳಿಗೆ ವಿದ್ಯುತ್ ಕೊಡಬೇಕಾದರೆ ಇಂಥ ಒಂದು ಸಮಸ್ಯೆ ಇದೆ ನೀವು ಯಾವುದು ಯೋಚನೆ ಮಾಡದೆ, ಇದರ ಬಗ್ಗೆ ಚಿಂತನೆ ಮಾಡದೆ ತರಾತುರಿಯಲ್ಲಿ ಪ್ರತಿವರ್ಷ ವಿದ್ಯುತ್ ದರ ಏರಿಸುವುದು ಮಾಡಿದರೆ ಹೇಗೆ? ಒಂದು ಕಡೆ ಸದನಸಮಿತಿಗಳನ್ನು ಮಾಡುತ್ತೀರಿ, ಇನ್ನೊಂದು ಕಡೆ ಅದರ ಶಿಫಾರಸ್ಸುಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ನೀವು 25 ರಿಂದ 250ರಷ್ಟು ಹೆಚ್ಚುಸುತ್ತೀರಿ ಎಂದರೆನೀವು ನಿಜವಾಗಿಯೂ ಈ ಸದನಕ್ಕೆ ಅಗೌರವವನ್ನು ತೋರಿಸುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ನಾವು ಶಿಫಾರಸ್ಸು ಮಾಡಿದ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಮಾಡಿ ಮುಖ್ಯಮಂತ್ರಿಗಳಿದ್ದಾರೆ, ಯಡಿಯೂರಪ್ಪನವರಿದ್ದಾರೆ. ವಾಟಾಳ್ ನಾಗರಾಜವರಿದ್ದಾರೆ,

ವಿವಿಧ ಪಕ್ಷದ ಇನ್ನೂ ಅನೇಕ ಜನ ಸದಸ್ಯರು ಕೂಡ ಇದ್ದಾರೆ. ಅಂತಹ ಕಮಿಟಿಯವರು ಶಿಫಾರಸ್ಸು ಮಾಡಿದ್ದೇನು? ನೀವು ಮಾಡಿದ್ದೇನು? ಆ ಕಮಿಟಿಯವರು ಪ್ರತಿವರ್ಷ ಇಷ್ಟೇ ಹೆಚ್ಚು ಮಾಡಬೇಕು ಎಂದು ಶಿಫಾರಸ್ಸುಮಾಡಿಲ್ಲ. ಅಂದರೆ ನೀವು ಮಾತ್ರ ನಿಮ್ಮ ಮನಸ್ಸಿಗೆ ಬಂದಂತೆ ಇವತ್ತಿನ ದಿವಸ ಹೆಚ್ಚಳ ಮಾಡಿದ್ದೀರಿ. ಪೇಜ್ ನಂ. 20 ಅವರ ಶಿಫಾರಸ್ಸಿನಲ್ಲಿ ಏನು ಹೇಳಿದ್ದಾರೆ ಅದು ನಮ್ಮ ಗಮನಕ್ಕೂ ಬಂದಿದೆ. ಶಿಫಾರಸ್ಸು ತಾನೇ, ಕಾನೂನು ಏನೂ ಅಲ್ಲವಲ್ಲಾ ಅದನ್ನೇಕೆ ಕೇಳಬೇಕು ಎಂದು ನೀವು ಅದನ್ನು ಬದಿಗಿಟ್ಟು ಮಾಡತಕ್ಕಂಥ ಬಂದಧೈರ್ಯ ನಿಮಗೆ ಇದೆ. ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಅನ್ನೋ ಹಾಗೆ ನೀವುಮಾಡಿದ್ದೇ ಸರಿ ಅಂದುಕೊಂಡರೆ ಜನ ಇದರಿಂದ ಬೇಸತ್ತಿದ್ದಾರೆ. ಇವತ್ತಿನ ದಿವಸ ಯಾರಿಗೂ ಸಮಧಾನ ಇಲ್ಲ ಬಡವರಿಂದ ಶ್ರೀಮಂತರವರೆಗೆ ಯಾರಿಗೂ ಸಮಧಾನ ಇಲ್ಲ. ಯಾವುದೇ ಒಂದು ಟ್ಯಾಕ್ಸ್ ಹಾಕುವಾಗ ಸಮಾಧಾನವಾಗಿ ಇರುತ್ತಾರೆ ಎಂದು ನಾನು ಹೇಳುವುದಿಲ್ಲ. ಯಾವುದೇ ಸರ್ಕಾರ ಟ್ಯಾಕ್ಸ್ ತಂದಾಗ ಸಾರಿಗೆ ದರ ಹೆಚ್ಚು ಮಾಡಿದಾಗ, ಸೇಲ್ಸ್‌ಟ್ಯಾಕ್ಸ್ ಹೆಚ್ಚು ಮಾಡಿದಾಗ ನೋವನ್ನು ಹೇಳುತ್ತಾರೆ, ಆದರೆ ಆಟ್‌ಲಿಸ್ಟ್ ಕೆಲವು ಜನರಿಗಾದರೂ ಸಮಾಧಾನ ತರಬೇಕಲ್ಲಾ? ಯಾವ ಒಂದು ವರ್ಗಕ್ಕೆ ನೀವು ಕಮಿಟೆಡ್ ಆಗಿದ್ದೀರಿ, ಆ ವರ್ಗದವರಾದರೂ ಸಮಾಧಾನದಿಂದ ಇದ್ದಾರಾ? ರೈತರಾಗಲೀ, ಬಡವರಾಗಲೀ, ಇವರ ಕಡೆನಿಮಗೆಚಿಂತನೆ ಇಲ್ಲ, ಪುರಸೊತ್ತು ಇಲ್ಲ ಎಂದರೆ ನಾವು ಏನು ಮಾಡಲಿ? ಯಾರಿಗೆ ಟ್ಯಾಕ್ಸ್ ಹೆಚ್ಚಳ ಮಾಡಬೇಕು, ಯಾರಿಗೆ ಕಡಿಮೆ ಮಾಡಬೇಕು ಅಥವಾ ಕೃಷಿ ಉತ್ಪಾದನಾ ಮಾಡತಕ್ಕ ರೈತರಿಗೆ ನೀವು ಎಷ್ಟರ ಮಟ್ಟಿಗೆ ಭಾರ ಹಾಕಬೇಕು ಎನ್ನತಕ್ಕಂಥದ್ದನ್ನು ನೀವು ಯೋಚನೆ ಮಾಡಬೇಕು. ಅದನ್ನು ಬಿಟ್ಟು ಇವತ್ತು ಸಂಪೂರ್ಣವಾಗಿ ರೈತರನ್ನು ಹೀರತಕ್ಕ ಪ್ರಯತ್ನ ಮಾಡುತ್ತಿದ್ದೀರಿ. ಮತ್ತು ಪದೇ ಪದೇ ಎಲ್ಲರೂ ಕೂಡ ರೈತರ ಬಗ್ಗೆ ವರದಿ ಕೊಡುತ್ತಿರುವುದರಿಂದ ಏನಾಗಿದೆ ಎಂದರೆ, ಯಾರೇ ಬರಲಿ ರೈತರಿಗೆ ಪುಕ್ಕಟೆಯಾಗಿ ಪಂಪ್‌ಸೆಟ್ ಕೊಡುತ್ತಿದ್ದೀರಿ ಅದಕ್ಕಾಗಿ ಬಹಳ ಲುಕ್ಸಾನ್ ಆಗಿದೆ, ಅದನ್ನು ಭರಪಾಯಿ ಮಾಡಬೇಕು ಎಂದರೆ ಅವರಿಗೆ ಟ್ಯಾಕ್ಸ್ ಹಾಕಲೇಬೇಕು. ಇವತ್ತಿನ ದಿವಸ ಏನಾದರೂ ಅವರಿಗೆ ಮಾಡಲೇಬೇಕು ಎಂದು ತಾವು ನಿರ್ಧಾರ ತಾಳಿದ್ದೀರಿ, ನೀವು ಕೊಟ್ಟಂತಹ ಅಂಕಿಅಂಶಗಳ ಪ್ರಕಾರ ಇವತ್ತು ಬಾಕಿ ಬರತಕ್ಕಂಥದ್ದು ಯಾರ ಮೇಲೆ ಜಾಸ್ತಿ ಇದೆ, ಕೇಂದ್ರ ಸರ್ಕಾರ ರಾಜ್ಯಸರ್ಕಾರ ಹಾಗೂ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಿಂದ 187 ಕೋಟಿ ಅರಿಯರ್ಸ್ ಆಮೇಲೆ ಮುನ್ಸಿಪಾಲಿಟಿ, ಕಾರ್ಪೋರೇಷನ್ ಮತ್ತು ಬೆಂಗಳೂರು ಕಾರ್ಪೋರೇಷನ್ ನಿಂದ 157 ಕೋಟಿ, ಆಮೇಲೆ ಕರ್ನಾಟಕ ರಾಜ್ಯ ಅರ್ಬನ್ ವಾಟರ್ ಸಪ್ಲೈ ಇವರಿಂದ 157 ಕೋಟಿ, ಬೆಂಗಳೂರು ವಾಟರ್ ಸಪ್ಲೈಯಿಂದ 4 ಕೋಟಿ,

ವಿಐಎಸ್ಎಲ್‌ನಿಂದ 4 ಕೋಟಿ ರೈತರ ಐ.ಪಿ. ಸೆಟ್‌ನಿಂದ 67 ಕೋಟಿ ಬಾಕಿ ಇರತಕ್ಕಂಥದ್ದು. ಆಮೇಲೆ ಬೇರೆ ಕ್ಯಾಟಗರಿಗಳಿಂದ 143 ಕೋಟಿ ಒಟ್ಟು 768 ಕೋಟಿ. ಅದರಲ್ಲಿ ರೈತರ ಬಾಕಿ ಎಂದರೆ ಕೇವಲ 67 ಕೋಟಿ ಮಾತ್ರ ಅಂದರೆ ಹಾರ್ಡಲಿ 14 ಪರ್ಸೆಂಟ್ ಕೂಡ ಬರುವುದಿಲ್ಲ. ಆದರೆ ರೈತರ ಹೆಸರೇ ಎಲ್ಲರ ಬಳಕೆಯಲ್ಲಿದೆ. ಅದಕ್ಕಾಗಿ ಒಂದು ವರದಿಯನ್ನು ಕೂಡ ಕೊಟ್ಟಿದ್ದಾರೆ. ಅಮೂಲ್ಯರೆಡ್ಡಿ ಎನ್ನುವ ಒಬ್ಬರು ಸರ್ವೇಮಾಡಿದ್ದಾರೆ. ಇದರ ಬಗ್ಗೆ ಕೊಟ್ಟಿದ್ದಾರೆ. ಅಮೂಲ್ಯರೆಡ್ಡಿ ಎನ್ನುವ ಒಬ್ಬರು ಸರ್ಕಾರವೇ ಮಾಡಿದ್ದಾರೆ. ಇದರ ಬಗ್ಗೆ ಅವರು ಕೆ.ಇ.ಬಿಗೆ ಲುಕ್ಸಾನ್ ಆಗಿರತಕ್ಕಂಥದ್ದು ರೈತರಿಂದ ಅಲ್ಲ ಅದಕ್ಕೆ ಬೇರೆ ಕಾರಣ ಇದೆ ಎಂದು ಹೇಳಿದ್ದಾರೆ. ಇವರು ಇವತ್ತು ಟ್ರಾನ್ಸ್‌ಮಿಷನ್ ಲಾಸ್ 18 ಪರ್ಸೆಂಟ್ ಎಂದು ಹೇಳುತ್ತಾರೆ. ಆದರೆ ಅವರು ಹೇಳಿದ್ದಾರೆ 30 ಪರ್ಸೆಂಟ್ ಇದೆ ಎನ್ನತಕ್ಕ ಮಾತನ್ನು ಇದರ ಬಗ್ಗೆ ಸರ್ವೇ ಮಾಡಿದಂತ ಅಮೂಲ್ಯರೆಡ್ಡಿಯವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ನಾನು ಈ ಮಾತನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಯಾವಾಗ ದೊಡ್ಡ ದೊಡ್ಡ ಇಂಡಸ್ಟ್ರೀಯಲಿಸ್ಟ್‌ಗಳಿಂದ ಇವತ್ತು ಬಾಕಿ 200-150-70 ಕೋಟಿ ಗಳಷ್ಟು ಬಾಕಿ ಕೊಡಬೇಕಾಗಿದೆ. ಅವರನ್ನು ಬಿಟ್ಟು ಕೇವಲ ರೈತರನ್ನು ಏಕೆ ಬಲಿಪಶು ಮಾಡುತ್ತಿದ್ದೀರಿ? ಅವರಿಗೆ ಏಕೆ ಇಷ್ಟೊಂದು ಸೋಷನೆ ಮಾಡುತ್ತಿದ್ದೀರಿ? ಇವತ್ತು ನಾವು ಹಿಂದಿನ ಸರ್ಕಾರ ಫ್ರೀ ಕೊಟ್ಟಿತ್ತು ಎಂದ ತಕ್ಷಣವೇ ಇವರು ತಂತಿ ಫ್ರೀ ಕೊಡುತ್ತೇವೆ, ಪೋಲ್‌ಫ್ರೀ ಕೊಡುತ್ತೇವೆ ಎಂದು ತಮಾಷೆಯಾಗಿ ಸ್ವಲ್ಪ ಮಾತನಾಡತಕ್ಕ ಚಟ ಇದೆ. ನೀವು ಅನೇಕ ದೊಡ್ಡ ದೊಡ್ಡ ಇಂಡಸ್ಟ್ರೀಯಲಿಸ್ಟ್ ಗಳಿಗೆ ರಿಯಾಯಿತಿ ಕೊಡುತ್ತೀರಿ. ಅದರಷ್ಟೇ ರಿಯಾಯಿತಿಯನ್ನು ನೀವು ರೈತರಿಗೆ ಕೊಟ್ಟರೆ ಹೆಚ್ಚಿನ ಜನರಿಗೆ ಅನುಕೂಲವಾಗುತ್ತದೆ. ಮತ್ತು ನೀರಾವರಿ ಲಭ್ಯವನ್ನು ನೀವು ಕೊಟ್ಟಂತಾಗುತ್ತದೆ. ನೀವುಏನು ಮಾಡುತ್ತೀರಿ, ದೊಡ್ಡ ದೊಡ್ಡ ಡ್ಯಾಮ್‌ಗಳನ್ನು ಕಟ್ಟುತ್ತೀರಿ ಈಗ ಯು.ಕೆ.ಪಿ. ಹೇಮಾವತಿ, ಹಾರಂಗಿ ಮುಂತಾದ ಯಾವುದೇ ಪ್ರಾಜೆಕ್ಟ್ ತೆಗೆದುಕೊಂಡರೂ, ಯಾವುದೇ ಪ್ರಾಜೆಕ್ಟ್ ಕೂಡ 200 ಕೋಟಿ, 300 ಕೋಟಿ10 ಸಾವಿರ ಕೋಟಿ ಇದಕ್ಕಿಂತ ಕಡಿಮೆ ಇಲ್ಲ. ಅಂದರೆ ಇಲ್ಲಿಯಾರಿಗೆ ಕೆನಾಲ್ ನೀರು ಬರುವುದಿಲ್ಲ, ಡ್ಯಾಮ್ ನೀರು ಬರುವುದಿಲ್ಲ ಅಂಥ ಕಡೆ ನೀವು ಪಂಪ್‌ಸೆಟ್ ಹಾಕಿಸಿ ಅನುಕೂಲ ಮಾಡಿಕೊಟ್ಟರೆ ತಪ್ಪು ಏನಿದೆ? ಮತ್ತೆ, ಯಾರಿಗೆ ಸರಿಯಾಗಿ ಕೆನಾಲ್ ನೀರು, ಡ್ಯಾಮ್ ನೀರು ಸಿಗುತ್ತದೆ ಅಂಥವರಿಗೆ 4-5 ಕೋಟಿ ಖರ್ಚು ಮಾಡುತ್ತೀರಿ. ಇಲ್ಲಿ ರೈತರಿಂದ 67 ಕೋಟಿ ಮಾತ್ರ ಬಾಕಿ ಇದ್ದರೆ ಅವರ ಪಂಪ್‌ಸೆಟ್ ಸೀಜ್ ಮಾಡುತ್ತೀರಿ, ಅವರಿಗೆ ಪುನಃ ಕನ್‌ಕ್ಷನ್ ಕೇಳಿದರೂ ಕೊಡುವುದಿಲ್ಲ. ಮತ್ತು ಅವನು ನೂರು ಸಾರಿ ತಿರುಗಬೇಕು ಒಂದು ಕೆಲಸಕ್ಕಾಗಿ ಅಂಥ ಪರಿಸ್ಥಿತಿ ಬಂದಿದೆ. ನೀವು ತುಲನೆಮಾಡುವಾಗ ಕಂಪ್ಯಾರೀಟೀವ್

ಸ್ಟೇಟ್ ಮೆಂಟ್ ಮಾಡುವಾಗ ರೈತರನ್ನೇ ಒಂದು ಕಡೆ ಬೇರೆಯವರನ್ನೇ ಒಂದು ಕಡೆ ಮಾಡಿ. ನೀರಾವರಿ ಅನುಕೂಲ ಮಾಡಿಕೊಡಬೇಕು ರೈತರಿಗೆನ್ನತಕ್ಕ ನಿಮ್ಮ ಘನ ಉದ್ದೇಶ ಇರುವಾಗ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಗಾಗಿ ನೀವು ಸಾಲ ಇಂದು ಆ ಪ್ರಾಜೆಕ್ಟ್‌ಗಳನ್ನು ಪೂರ್ತಿ ಮಾಡಿ ರೈತರಿಗೆ ನೀರು ಕೊಡುತ್ತೀರಿ. ಆದರೆ ಆ ರೈತ ಪಿ.ಎಲ್.ಡಿ ಬ್ಯಾಂಕಿನಿಂದ ಸಾಲ ತೆಗೆಯುತ್ತಾನೆ. ಬಾವಿ ತೆಗಿಯಿಸಬೇಕಾದರೆ ಸಾಲ ತೆಗೆಯುತ್ತಾನೆ. ವಿದ್ಯುತ್ ಕಂಬಗಳನ್ನು ಎಳೆಯಬೇಕಾದರೆ ಅದಕ್ಕೂ ದುಡ್ಡು ಕೊಡುತ್ತಾನೆ, ಆದಾದ ಮೇಲೆ ಇಷ್ಟೆಲ್ಲಾಪ್ರಯತ್ನ ಪಟ್ಟು ಅದನ್ನು ಮೇನ್‌ಟೆನ್ ಮಾಡಿಕೊಂಡು ಅವನ ಹೊಲಕ್ಕೆ ಅವನು ನೀರು ತಂದುಕೊಳ್ಳಬೇಕಾಗುತ್ತದೆ. ಇನ್ನು ಡ್ಯಾಮ್‌ದಿಂದ ನೇರವಾಗಿ ನೀರು ಹೊಲಕ್ಕೆ ಹೋಗತಕ್ಕ ರೈತರನ್ನು ನೀವು ಮಾತನಾಡಿಸಲಿಕ್ಕೆ ತಯಾರು ಇಲ್ಲ. ಇದರ ಬಗ್ಗೆ ನೀವು ಸ್ವಲ್ಪ ಯೋಜನೆ ಮಾಡಿ. ಇಲ್ಲದಿದ್ದರೆ ಖಂಡಿತವಾಗಿ ಜನ ಇವತ್ತು ದಂಗೆ ಏಳುತ್ತಾರೆ. ನೀವು ತಿಳಿದುಕೊಂಡಿರಬಹುದು ಇವತ್ತು ಜನತೆ ಸಮಾಧಾನದಿಂದ ಇದ್ದಾರೆಂದು ಅದರೆ ಜನರ ಹೊಟ್ಟೆ ಕುದಿಯುತ್ತಿದೆ. ಈಗ ಜನತಾದಳದಲ್ಲಿ ಹೇಗ ಬಿರಕು ಬಿಟ್ಟಿದೆ ಹಾಗೆ, ಬಿರುಕು ಬಿಟ್ಟಿದ್ದರೂ ಕೂಡ ಅನೇಕ ಜನಕ್ಕೆ ನಿಮ್ಮಮುಂದೆ ಬಂದು ಹೇಳಲಿಕ್ಕೆ ದೊರೆ ಇಲ್ಲ, ಯಾವಾಗ ನಿಮ್ಮನ್ನು ಜಗ್ಗ ಬೇಕು ನಿಮ್ಮ ಕಾಲು ಎಳೆಯಬೇಕೆಂದು ಕಾಯುತ್ತಿದ್ದಾರೆ ಹಾಗೆಯೇ ಜನರ ಹೊಟ್ಟೆ ಕುದಿಯುತ್ತಿದೆ. ಆದ್ದರಿಂದ ನೀವು ಪ್ರತಿವರ್ಷ ವಿದ್ಯುತ್‌ದರ ಎರಿಸುವುದು, ಬಸಚಾರ್ಜ್ ಏರಿಸುವುದು, ಸೇಲ್ಸ್ ಟ್ಯಾಕ್ಸ್ ಹೆಚ್ಚಳ ಮಾಡತಕ್ಕಂಥದ್ದು ನೀರಿನ ದರ ಜಾಸ್ತಿ ಮಾಡತಕ್ಕಂಥದ್ದು, ಬೆಂಗಳೂರಿನಲ್ಲಿ ಬಸ್ ಚಾರ್ಜ್ ಮೇಲೆ ಟ್ಯಾಕ್ಸ್ ಆಯಿತು, ನೀರಿನ ಮೇಲೆ ಟ್ಯಾಕ್ಸ್ ಆಯಿತು, ಇನ್ನು ಗಾಳಿಗೆಮಾತ್ರ ಉಳಿದಿದೆ. ಇನ್ನು ಆಮ್ಲಜನಕ ಹೆಚ್ಚು ತೆಗೆದುಕೊಳ್ಳುವಂಥರಿಗೆ ಟ್ಯಾಕ್ಸ್ ಹಾಕುವುದು ಒಂದು ಬಾಕಿ ಉಳಿದಿದೆ. ವಿಧಾನ ಸೌಧದ ಅಕ್ಕಪಕ್ಕ ತಿರುಗಾಡುವಂಥವರಿಗೆ ಅಥವಾ ಟಾಟಾ ಇನ್ಸಿಟಿಟ್ಯೂಟ್‌ನಲ್ಲಿ ಅಡ್ಡಾಡುವಂಥವರಿಗೆ ಅಥವಾ ಜಿಂದಾಲ್‌ನಲ್ಲಿ ಹೋಗತಕ್ಕಂಥವರಿಗೆ ಇಂತಹವರಿಗೆಲ್ಲಾ ಟ್ಯಾಕ್ಸ್ ಹಾಕುವುದು ಬಾಕಿ ಉಳಿದಿದೆ. ಏಕೆಂದರೆ ಅಲ್ಲಿ ಶುದ್ಧ ಗಾಳಿ ಸಿಗುತ್ತದೆ. ಆ ಗಾಳಿ ಮೇಲೆ ಕೂಡ ಟ್ಯಾಕ್ಸ್ ಹಾಕಿದರೆ ಆಯಿತು. ಶ್ರೀ ವಾಟಾಳ್ ನಾಗರಾಜ್‌ರವರು ಮುಂಜಾನೆ ವಾಕ್ ಇಲ್ಲೇ ಮಾಡುತ್ತಾರೆ. ಅವರು ಇಲ್ಲಿ ಶುದ್ಧಗಾಳಿ ತೆಗೆದುಕೊಳ್ಳುತ್ತಾರೆಂದು ಅಂಥವರಿಗೆಲ್ಲರಿಗೂ ಈ ಟ್ಯಾಕ್ಸ್ ಹಾಕಿದರೆ ಒಳ್ಳೆಯದು, ದಯವಿಟ್ಟು ಆ ಕೆಲಸವನ್ನು ಮಾಡಿ. ಏಕೆಂದರೆ ಅದರಲ್ಲೂ ರೆವೆನ್ಯೂ ಹೆಚ್ಚು ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾವು ಏನೋ ದೇವರ ಹೆಸರು ಹೇಳಿ ಸ್ವಲ್ಪ ತಿರುಗಾಡುತ್ತಿದ್ದೇವೆ. ಅದಕ್ಕೂ ನೀವು ಚಾರ್ಜ್ ಹಾಕಿ ಎಂದು ಹೇಳಿದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಭಾಗ್ಯ ಜ್ಯೋತಿ ಸ್ಕೀಮನಲ್ಲಿ ಬಡವರಾದವರು ಒಂದು ಬಲ್ಬ್ ಇಟ್ಟುಕೊಂಡರೆ ಅವರಿಗೂ ಒಂದು ರೂಪಾಯಿ ಟ್ಯಾಕ್ಸ್ ಹಾಕುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನೀವು ಅದನ್ನು ಹೇಳಿ. ಅದು ಬಿಟ್ಟುನಾವು ತಿರುಗಾಡುವಂಥದ್ದು ಕಣ್ಣಿಗೆ ಚುಚ್ಚುವ ಹಾಗೆ ಮಾಡಿ ಅದಕ್ಕೆ ತೆರಿಗೆ ಹಾಕಿ ಎಂದು ಹೇಳಿದರೆ ಹೇಗೆ? ಅದಕ್ಕೆ ಗೋರೆ ಎಂದು ಚೀರ್ಮನ್‌ರು ಇದ್ದಾರೆ, ನೀವು ಹೇಳಿದ ತಕ್ಷಣ ಅವರು ನಾಳೆ ಬೆಳಿಗ್ಗೆ ರೆಡಿ ಇದ್ದಾರೆ. ಅವರು ಯಾವುದಕ್ಕೂ ಹಿಂದು ಮುಂದು ನೋಡುವುದಿಲ್ಲ. ನೀವು ಹೇಳಿದ್ದು ಅವರಿಗೊಂದು ದಾರಿಯಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದು ಒಂದು ಹೊಸ ಟ್ಯಾರಿಫ್ ಅವರು ಮಾಡಲಿ ಏಕೆಂದರೆ ರೈತರ ಮೇಲೆ ಆಯಿತು, ಎಲ್ಲರ ಮೇಲೆ ಆಯಿತು. ಇನ್ನು ಗಾಳಿಗೆ ತಿರುಗಾಡತಕ್ಕಂಥ ಇವರಿಗೂ ಕೂಡ ಒಂದು ಟ್ಯಾಕ್ಸ್ ಹಾಕತಕ್ಕಂಥದ್ದನ್ನು ಸರ್ಕಾರ ಮಾಡಿ ಟ್ಯಾಕ್ಸ್‌ನ್ನು ಕಲಿಕ್ಟ ಮಾಡಲಿ. ಏಕೆಂದರೆ ರಿಸೊರ್ಸೆಸ್ ಪೊಬಿಲೈಸ್‌ಗೋಸ್ಕರ ಇದು ಎಲ್ಲಾ ಬೇಕು. ಏಕೆಂದರೆ ಯಾವುದೇ ಒಂದು ಸಂಸ್ಥೆಗಳು ಲಾಭದಲ್ಲಿ ನಡೆದಿಲ್ಲ ಎಂದರೆ, ಎಲ್ಲಾ ಸಂಸ್ಥೆಗಳು ಲುಕ್ಸಾನ್‌ನಲ್ಲಿ ಇದ್ದಾಗ ಇವೊತ್ತಿನ ದಿವಸ ಹಣ ಬೇಕಲ್ಲಾ. ಇನ್ನು ಮುಂದೆ ಆ ಕೆಲಸವನ್ನು ಕೂಡ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ.

ಈಗ ಈಗ ಅಮೂಲ್ಯ ರೆಡ್ಡಿ ಇಂಟರ್‌ನ್ಯಾಶನಲ್ ಎನರ್ಜಿ ಇನಿಶಿಯೇಟಿವ್ ಅವರೇ ಒಂದು ಸೆಮನಾರ್‌ನಲ್ಲಿ ಹೇಳಿರತಕ್ಕಂಥ ಮಾತು ಇಲ್ಲಿ ಬಂದಿತ್ತು. ಹಿಂದೆ ಕೂಡ ಆ ವಿಷಯ ಪ್ರಸ್ತಾಪ ವಿಷಯ : 29-7-1997 22 ಎ

ಪ್ರಸ್ತಾಪ ಮಾಡಿದ್ದೇವು. ಅವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೂಡ ಕೊಟ್ಟಿದ್ದಾರೆ. ದಿನಾಂಕ 8-2-1997ರಂದು ಚೇಂಬರ್ ಆಫ್ ಕಾಮರ್ಸ್‌ನು ಒಂದು ಮೀಟಿಂಗ್‌ನಲ್ಲಿ ಈ ಮಾತನ್ನು ಹೇಳಿದ್ದಾರೆ.

"Power worth Rs. 1000 Crores was misused by way of unmetered consumption in 1995. and Energy Audit conducted for the first time by the K.E.B. has revealed. The Audit Report said the revenue loss of Rs. 1000 Crores to the K.E.B. was accumulated in the name of free energy supply to Irrigation Pumpsets and transmission and distribution losses."

ಈ ಒಂದು ಸಾವಿರ ಕೋಟಿ ರೂಪಾಯಿ ಲುಕ್ಸಾನ್ ಆಗುತ್ತಿದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿ ಆ ಮೇಲೆ ಇದಕ್ಕೆ ಸಂಬಂಧಪಟ್ಟಂತೆ ವಿಷಯವನ್ನು ನಾಲ್ಕನೇ ಡಿಸೆಂಬರ್ ಒಂದು ಯೋಜನೆಯನ್ನು ಒಂದು ಡಿಸ್ಕಶನ್‌ನ್ನು ಪ್ರಾರಂಭ ಮಾಡಿದರು. ಆ ಒಂದು ಡಿಸ್ಕಷನ್‌ನಲ್ಲಿ ಕೂಡ ಸ್ಪಷ್ಟವಾಗಿ ಈ ಮಾತನ್ನು ಹೇಳಿದ್ದಾರೆ. ಈ ಪಂಪ್‌ಸೆಟ್‌ದಿಂದ ಲುಕ್ಸಾನ್ ಆಗಿಲ್ಲ, ಇದು ಕೇವಲ ಹೇಳಿಕೆ ಮಾತು, ಈ ಪಂಪ್‌ಸೆಟ್‌ದಿಂದ ಈ ರೈತರಿಂದ ಬಹಳ ಕಡಿಮೆ ಹಣ ಇವ್ಹೊತ್ತು ಲುಕ್ಸಾನ್ ಆಗುತ್ತಿದೆಯೇ ಹೊರತಾಗಿ ಇದು ಟ್ರಾನ್ಸ್‌ಮಿಷನ್ ಲಾಸ್, ಮಿಸ್ ಮ್ಯಾನೇಜ್‌ಮೆಂಟ್ ಲಾಸ್ ಮತ್ತು ದೊಡ್ಡ ದೊಡ್ಡ ಇಂಡಸ್ಟ್ರೀಸ್‌ಗಳು ಏನು ಕಳ್ಳತನ ಮಾಡುತ್ತಿದ್ದಾರೆ ಆ ಕಳ್ಳತನದಲ್ಲಿ ಈ ಸಾವಿರ ಕೋಟಿರೂಪಾಯಿ ಸೋರಿ ಹೋಗುತ್ತದೆ. ಎನ್ನತಕ್ಕಂಥ ಮಾತನ್ನು ಇರೊತ್ತಿನದಿವಸ ಏಕ್ಸ್‌ಪೋರ್ಟ್ಸ್ ಕೂಡ ಹೇಳುತ್ತಿದ್ದಾರೆ. ಇಷ್ಟೆಲ್ಲಾಹೇಳಿದ ಮೇಲೂ ಇವರು ಬಡವರಿಗೆ, ರೈತರಿಗೆ ಸಣ್ಣಪುಟ್ಟ ಉದ್ಯಮದಾರರಿಗೆ ಮತ್ತು ದೊಡ್ಡ ಇಂಡಸ್ಟ್ರೀಯಲಿಸ್ಟ್‌ಗೆ ಹಣವನ್ನು ಹಾಕತಕ್ಕಂಥದ್ದು ಮಾಡಿದ್ದಾರೆ. ಏಕೆಂದರೆ ಇವ್ಹೊತ್ತಿನದಿವಸ ಇಂಡಸ್ಟ್ರೀಸ್ ಕೂಡ ಕ್ಲೋಸ್ ಆದರೆ ಲೇಬರ್ ಪ್ರಾಬ್ಲಮ್ ಆಗುತ್ತದೆ. ಒಂದು ಕಡೆ ಅನ್ ಎಂಪ್ಲಾಯಮೆಂಟ್ ಜಾಸ್ತಿಯಾಗುತ್ತಿದೆ. ಇನ್ನೊಂದು ಕಡೆ ನೀವು ಇರತಕ್ಕಂಥ ಇಂಡಸ್ಟ್ರೀಸ್‌ಗಳನ್ನು ಕ್ಲೋಸ್ ಮಾಡಿದರೆ ಯಾವ ರೀತಿ ನೀವು ಎಂಪ್ಲಾಯಮೆಂಟ್ ಕೊಡುತ್ತೀರಿ? ಅದಕ್ಕೆ ಏನಾದರೂ ಯೋಜನೆ ಮಾಡಿದ್ದೀರಾ? ಅದಕ್ಕೆ ಅನೇಕ ಜನ ಜಾಯಿಂಟ್‌ಸೆಲೆಕ್ಟ್ ಕಮಿಟಿಯ ಮುಂದೆಮೆ ಮೆಮೋರಂಡಂ ಕೂಡ ಕೊಟ್ಟಿದ್ದಾರೆ. ಜಾಯಿಂಟ್ ಸೆಲೆಕ್ಟ ಕಮಿಟಿಯ ಶಿಫಾರಸ್ಸು ಪ್ರಕಾರ ಕೂಡ ಅವರು ಹೋಗಲಿಲ್ಲ. ಏಕೆಂದರೆ ಆ ಕಮಿಟಿಗೆ ಏನಾದರೂ ಮಹತ್ವ ಬೇಕಲ್ಲಾ. ಅದಕ್ಕೆ ಯಾವ ರೀತಿಯಿಂದ ಕೂಡ ತಾವು ಗೌರವ ಕೊಟ್ಟಿಲ್ಲ. ಅದರಲ್ಲಿ ಆ ಮನೆಯ ಹಾಗೂ ಈ ಮನೆಯ ಎಲ್ಲಾ ಸದಸ್ಯರು ಇದ್ದಾರೆ. ಅದರಲ್ಲಿ ಹದಿಮೂರು ಶಿಫಾರಸ್ಸುಗಳು ಇವೆ. ಆ ಹದಿಮೂರು ಶಿಫಾರಸ್ಸುಗಳನ್ನು ನಾನು ಓದಲಿಕ್ಕೆ ಹೋಗುವುದಿಲ್ಲ. ಎರಡು ಮೂರನ್ನು ಮಾತ್ರ ಓದುತ್ತೇನೆ.

"The Government may release subsidy to the K.E.B every year for subsidised power supply being given to I. P. Sets and Bhagya Jyothi."

ಈ ಶಿಫಾರಸ್ಸಿನಲ್ಲಿ ಐಪಿ ಸೆಟ್ಸ್‌ರವರಿಗೆ ಸಬ್ಸಿಡಿ ಕೊಡಬೇಕು ಮತ್ತು ಪ್ರತಿ ವರ್ಷ ಕೆ. ಇ. ಬಿ. ರವರಿಗೆ ರಿಲೀಸ್‌ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅಂದರೆ ಕುಟೀರ್ ಜ್ಯೋತಿ, ಭಾಗ್ಯ ಜ್ಯೋತಿಯವರಿಗೂ ಕೂಡ ಸಬ್ಸಿಡಿ ಕೊಡಬೇಕು, ರಿಲೀಸ್‌ಮಾಡ ಬೇಕು ಎಂದು ಇದೆ. ಇದನ್ನು ಇಂಪ್ಲಿಮೆಂಟ್ ಮಾಡಿದ್ದೀರಾ ? ಇಂಪ್ಲಿಮೆಂಟ್ ಮಾಡಿದರೆ

ಮುನ್ನೂರು ರೂಪಾಯಿ ಪರ್‌ಹಾರ್ಸ್ ಪಾವರ್ ಮತ್ತು ಹತ್ತು ಹಾರ್ಸ್ ಪವರ್ ಆದರ ಮೇಲೆ ಪ್ರತಿಯೊಂದು ಯುನಿಟ್ ಗೆ ಒಂದು ರೂಪಾಯಿ ಎನ್ನತಕ್ಕಂಥ ಪ್ರಶ್ನೆ ಎಲ್ಲಿ ಬರುತ್ತಿತ್ತು. ಇದನ್ನು ನಾನು ಕೇಳುತ್ತೇನೆ. ಇನ್ನು ಎರಡನೇಯದು,

"The Government may direct the K.E.B. to conduct special drive to recover outstanding revenue arrears within Six Months".

ಆರು ತಿಂಗಳೊಳಗಾಗಿ ಸುಮಾರು ಏಳನೂರು ಅರವತ್ತೆಂಟು ಕೋಟಿ ರೂಪಾಯಿ ಏನು ಬಾಕಿ ಇದೆ ಅದನ್ನು ವಸೂಲಿ ಮಾಡಿ ಎಂದು ಹೇಳಿದ್ದಾರೆ. ಅದು ಆರು ತಿಂಗಳೊಳಗಾಗಿ ಆಗುವುದಿಲ್ಲ ಎಂದು ಹೇಳುತ್ತೀರಿ. ಆದರೆ ತಾವು ಏನಾದರೂ ಪ್ರಯತ್ನ ಮಾಡಿ ಶೇಕಡಾ ಐವತ್ತರಷ್ಟಾದರೂ ರಿಕವರಿ ಮಾಡಿಸಿದ್ದೀರಾ ಅಥವಾ ಕನಿಷ್ಠಪಕ್ಷ ಶೇಕಡಾ 25 ರಷ್ಟಾದರೂ ರಿಕವರಿ ಮಾಡಿಸಿದ್ದೀರಾ ? 768ಕೋಟಿ ರೂಪಾಯಿನಲ್ಲಿ ತಾವು ಎಷ್ಟು ರಿಕವರಿ ಮಾಡಿಸಿದ್ದೀರಿ? ಅದೆಲ್ಲಾ ಬಿಟ್ಟು ಹೋಗಿ 67 ಕೋಟಿ ರೂಪಾಯಿರೈತರ ಬಾಕಿ ಏನು ಇದೆ ಅವರ ಪಂಪ್‌ಸೆಟ್ಟಗಳ ಬೆನ್ನ ಹಿಂದೆ ಬಿದ್ದಿದ್ದೀರಿಯೇ ಹೊರತಾಗಿ ಇನ್ನು ಉಳಿದಂಥ ಇಂಡಸ್ಟ್ರೀಸ್, ಕಾರ್ಪೋರೇಷನ್ ಹಾಗೂ ಪಬ್ಲಿಕ್ ಅಂಡರ್‌ಡೇಕಿಂಗ್‌ರವರಿಂದ ವಸೂಲಿ ಮಾಡತಕ್ಕಂಥ ಶಕ್ತಿ ನಿಮ್ಮಲ್ಲಿ ಬಂದಿಲ್ಲ. ಇಲ್ಲವಾದರೆ ಸರ್ಕಾರದಿಂದ ನೀವು ಭರಿಸಿ ಕೆ.ಇ.ಬಿ.ಗೆ ಕೊಡಬೇಕು ಆ ಕಲ್ಪನೆಕೂಡ ತಾವು ಮಾಡಲಿಲ್ಲ. ಆ ಕೆಲಸ ಕೂಡ ತಾವು ಮಾಡಲಿಲ್ಲ. ಆ ಶಿಫಾರಸ್ಸು ಕೂಡ ತಾವು ಗಣನೆಗೆ ತೆಗೆದುಕೊಳ್ಳಲಿಲ್ಲ. ಅದೇ ರೀತಿಯಾಗಿ ನಾಲ್ಕನೇ ಶಿಫಾರಸ್ಸು "The Government may direct the KEB/KPC to examine the possibility of Stopping the benefit of extending free power supply to its employees." ಎಂದು ಇದೆ. ಇದನ್ನು ಇಂಪ್ಲಿಮೆಂಟ್ ಮಾಡಿದ್ದೀರೋ? ಅಂದರೆ ಅವರು ಕೊಟ್ಟಂಥ ಹದಿಮೂರು ಸಲಹೆಗಳು ಏನು ಇವೆ ಅದು ಆಚರಣೆಯಲ್ಲಿ ತಂದಮೇಲೆ, ಇಂಪ್ಲಿಮೆಂಟ್ ಮಾಡಿದ ಮೇಲೂ ಲುಕ್ಸಾನ್‌ನಲ್ಲಿದೆ ಎಂದರೆ ಇದಕ್ಕೆ ನಾವು ಏನು ಮಾಡಬೇಕು ಎನ್ನತಕ್ಕಂಥ ಪ್ರಶ್ನೆ ನೀವು ಕೇಳಿದ್ದರೆ ನಾನು ಒಪ್ಪುತ್ತೇನೆ.ಇದುಯಾವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಲಿಲ್ಲ ಯಾವುದರ ಬಗ್ಗೆ ಕೂಡ ಚಿಂತನೆ ಮಾಡಲಿಲ್ಲ. ಅಥವಾ ಸದನ ಸೇರುತ್ತಿದ್ದೇವೆ ಅದರ ಬಗ್ಗೆ ಯೋಜನೆ ಮಾಡೋಣ ಎನ್ನತಕ್ಕಂಥ ಮಾತನ್ನು ಕೂಡ ನಾವು ಹೇಳಲಿಲ್ಲ. ಮುಂದೆ "The Government may direct t he KEB to fix energy meters to all the I.P. Sets." ಎಂದು ಹೇಳಿದ್ದಾರೆ ಇದು ಚರ್ಚೆಗೆ ಬಂದಿತ್ತು. ಇಲ್ಲೇ ಮಾತನಾಡಿದ್ದಾಯಿತು. ಅದರ ಬಗ್ಗೆ ಒಂದು ಸ್ಟೆಪ್ ತೆಗೆದು ಕೊಂಡಿದ್ದಾರೆ ಆದರೆ ಅದರಲ್ಲೂ

ಕೂಡ ಸಾಕಷ್ಟು ಹೆರ್ಯಾಸ್‌ಮೆಂಟ್ ಇದೆ ಎನ್ನತಕ್ಕಂಥದ್ದನ್ನು ಅನೇಕ ಸಾರಿ ನಮ್ಮ ಮಿತ್ರರು ತಮ್ಮ ಪ್ರಶ್ನೆಯ ಮುಖಾಂತರ ಕೇಳಿದ್ದಾರೆ. ಮಾನ್ಯ ಅಧ್ಯಕ್ಷರೆ ಇನ್ನೊಂದು ಸಲಹೆ ಏನು ಎಂದರೆ "The Government may direct the KEB to strengthen vigilance and technical audit cells in order to increase their activity in checking pilferage."

ಫಿಲ್ಫರೇಜನ್ನು ಕಡಿಮೆ ಮಾಡುವಗೋಸ್ಕರ ನೀವು ವಿಜಿಲಿನ್ಸ್ ಸ್ಟ್ರೆಂಗ್ಥನ್ ಮಾಡಬೇಕು ಎನ್ನತಕ್ಕಂಥದ್ದನ್ನು ಇವೊತ್ತು ಮಾನ್ಯ ಸುರೇಶ್ ಕುಮಾರ್‌ರವರು ಪ್ರಶ್ನೆಯ ಮುಖಾಂತರ ಕೇಳಿದ್ದಾರೆ. ಇದರ ಮೇಲೆ ಪ್ರಶ್ನೆ ಇವೊತ್ತು ಬಂದಿದೆ. ಅವರು ಉತ್ತರದಲ್ಲಿಕೊಟ್ಟಿರತಕ್ಕಂಥ ಅಂಕಿ ಸಂಖ್ಯೆ ನೋಡಿದರೆ ಇವೊತ್ತು ಶೇಕಡಾ 25 ರಷ್ಟು ಕೂಡ ಇದರಲ್ಲಿ ಇಂಪ್ಲಿಮೆಂಟ್ ಆಗಲಿಲ್ಲ. ಎಷ್ಟು ಹಿಂದೆ ಬಂದಿದ್ದಾರೆ ಎಂದರೆ ಯಾವುದೇ ಶಿಫಾರಸ್ಸಿಗ್ಗೆ ಬೆಲೆ ಇಲ್ಲ. ಇನ್ನೊಂದುವಿಶೇಷ ಏನು ಎಂದರೆ. "The Government may direct the KEB to go in for electronic energy meters in large scale." ಅದಕ್ಕೆ ಇಲ್ಲಿ ಎಲ್ಲರೂ ಒಪ್ಪಿದ್ದರು. ಅದನ್ನು ಪ್ರಾರಂಭ ಮಾಡಬೇಕು ಎನ್ನತಕ್ಕಂಥದ್ದು ಆಯಿತು. ಆದರೆ ಎಷ್ಟರಮಟ್ಟಿಗೆ ಕಮರ್ಷಿಯಲ್ ಲಾಸನ್ ಇದೆ, ಕಳ್ಳತನ ಎಷ್ಟರಮಟ್ಟಿಗೆ ನಿಂತಿದೆ, ಅದರಿಂದ ಏನು ಲಾಭ ಆಗಿದೆ ಎನ್ನತಕ್ಕಂಥ ಫೀಡ್ ಬ್ಯಾಕ್ ಏನಿಲ್ಲ.

1.40 ಪಿ.ಎಂ

"The Governemtn may direct KEB to evolve measures to give quality power supply and definite duration and uninterrupted power supply.....

ಉಪಾಧ್ಯಕ್ಷರು : ತಾವು ಇನ್ನೂ ಮಾತನಾಡುವುದಿದ್ದರೆ ಅದಕ್ಕೂ ಮುಂದೆ ಒಂದು ಪ್ರಕಟಣೆ ಇದೆ ಅದನ್ನು ಈಗ ಹೇಳಿಬಿಡುತ್ತೇನೆ.

ಶ್ರೀಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನು 5 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು : ಹಾಗಾದರೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಇವರು ಅನ್-ಇಂಟರಪ್ಟೆಡ್ ಪಾವರ್ ಸಪ್ಲೈ ಮಾಡುತ್ತೇವೆಂದು ಹೇಳಿದ್ದರು. ಅದಕ್ಕೆ ಅವರು ಒಪ್ಪಿಕೊಂಡು ಅದನ್ನೂ ಕೂಡ ಇಂಪ್ಲಿಮೆಂಟ್ ಮಾಡಲಿಲ್ಲ.ವಿದ್ಯುತ್ ಪೂರೈಕೆಯನ್ನು ಇಷ್ಟು ಗಂಟೆಯಿಂದ ಇಷ್ಟು ಗಂಟೆಯವರೆಗೆ ಕೈಗಾರಿಕೆಗಳವರಿಗೆ, ರೈತರಿಗೆ ಮಾಡುತ್ತೇವೆ ಎನ್ನುವ ಬಗ್ಗೆ ಸಮಯವನ್ನು ಕೂಡ ಇವರು ನಿಗದಿ ಮಾಡಿಲಿಲ್ಲ. ಜಂಟೀ ಸದನ ಸಮಿತಿ ಈ ಬಗ್ಗೆ ಸಲಹೆಯನ್ನು ಕೊಟ್ಟಿತ್ತು. ಆದರೆ ಇವರು ಯಾವ ಸಲಹೆಗಳನ್ನೂ ಕೂಡ ಇಂಪ್ಲಿಮೆಂಟ್ ಮಾಡದೇ ಅದರ ಬಗ್ಗೆ ಪರಿಗಣನೆಗೆ ತೆಗೆದುಕೊಳ್ಳದೇ ಇವೊತ್ತು ಏಕಾಏಕಿ ಹೊಸ ಸರ್ಕಾರಿ ಆದೇಶವನ್ನು ಸದನ ಪ್ರಾರಂಭವಾಗುವ ಸಂದರ್ಭದಲ್ಲಿ ಹೊರಡಿಸುವುದಕ್ಕೆ ಹೊರಟಿದ್ದಾರೆ. ಈ ರೀತಿಯಲ್ಲಿ ಇವರು ಇಡೀ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್‌ನ್ನು ಬಳಸುವ ಎಲ್ಲರ ಮೇಲೆ ಕೊಡಲಿ ಪೆಟ್ಟನ್ನು ಇವರು ಹಾಕಿದ್ದಾರೆ. ಆದುದರಿಂದ ದಯವಿಟ್ಟು ತಾವು ಈ ಸರ್ಕಾರಿ ಆದೇಶವನ್ನು ಹಿಂತೆಗೆದುಕೊಳ್ಳಬೇಕು. ತಾವು ಏನು ದಿನಾಂಕ 30-06-97ಕ್ಕೆ ಹೊಸ ನೋಟಿಫಿಕೇಷನ್ ಇಷ್ಯು ಮಾಡಿದ್ದೀರಿ ಅದನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು. ಈಗಾಗಲೇ 6 ತಿಂಗಳ ಹಿಂದೆಯೇ ವಿದ್ಯುತ್ ದರವನ್ನು ಅತಿ ಹೆಚ್ಚು ಮಾಡಲು ನಮಗೂ ಮತ್ತು ಎಲ್ಲಾ ಸದಸ್ಯರಿಗೂ ಮನಸ್ಸಿರಲಿಲ್ಲ. ಇಷ್ಟೊಂದು ಹೆಚ್ಚು ದರವನ್ನು ತರಾತುರಿಯಲ್ಲಿ ಪಂಪ್‌ಸೆಟ್‌ಗೆ ಇಷ್ಟು, ಎ.ಇ.ಹೆಚ್.ಗೆ ಇಷ್ಟು, ಮತ್ತು ಎಲೆಕ್ಟ್ರಾನಿಕ್ ಮೀಟರ್‌ಫಿಕ್ಸ್ ಮಾಡುವ ಬಗ್ಗೆ ಯಾರಿಗೂ ಮನಸ್ಸು ಇರಲಿಲ್ಲ. ಆದರೂ ಕೂಡ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರಲು ಎಲ್ಲರೂ ಕುಳಿತು ಕೆಲವೊಂದು ಒಪ್ಪಂದಕ್ಕೆ ಬಂದು ಈಗಾಗಲೇ ನೀವು 420 ಕೋಟಿ ರೂ.ಗಳವರೆಗೆ ದರವನ್ನು ಹೆಚ್ಚು ಮಾಡಿಕೊಳ್ಳಲು ನಾವೆಲ್ಲರೂ ಒಪ್ಪಿಗೆಯನ್ನು ಮತ್ತು ಮನ್ನಣೆಯನ್ನು ಕೊಟ್ಟಿದ್ದೇವೆ. ಹೀಗಿದ್ದರೂ ಕೂಡ ಅದು ಸಾಲುವುದಿಲ್ಲವೆಂದು ಈಗ ಏಕಾಏಕಿ ಮತ್ತೆ ದರವನ್ನು ಹೆಚ್ಚು ಮಾಡುತ್ತಿರುವುದನ್ನು ನೋಡಿದರೆ, ಅಧ್ಯಕ್ಷರೇ ಇವರು ಈ ರೀತಿ ಮಾಡುವುದಕ್ಕೆ ಹೊರಟಿರುವುದನ್ನು ನೋಡಿದರೆ ಎರಡೆರಡು ದಿವಸಗಳ ಕಾಲ ಉಪವಾಸ ಮಾಡಿದ ಮನುಷ್ಯ ಎರಡೂ ದಿವಸಗಳ ಊಟವನ್ನು ಒಮ್ಮೆಲೇ ಮಾಡುವುದಕ್ಕೆ ಪ್ರಯತ್ನ ಪಟ್ಟ ರೀತಿಯಲ್ಲಿ ದರವನ್ನು ಹೆಚ್ಚು ಮಾಡಿ ಹಣವನ್ನು ಕಲೆಕ್ಟ್ ಮಾಡುವುದಕ್ಕೆ ಹೊರಟಂತಿದೆ. ಈ ರೀತಿ ಒಟ್ಟಿಗೆ ಊಟ ಮಾಡಿದರೆ ಅರಗುವುದಿಲ್ಲ. ಆ ರೀತಿಯಲ್ಲಿ ನೀವು ಕೆಲಸವನ್ನು ಇವೊತ್ತು ಮಾಡುತ್ತಿದ್ದೀರಿ. ಇದರಿಂದ ರೈತರ ಮೇಲೆ, ಬಡವರ ಮೇಲೆ ಮತ್ತು ಸಣ್ಣ ಪುಟ್ಟ ಕೈಗಾರಿಕೆಗಳವರ ಮೇಲೆ ಹೆಚ್ಚು ಹೊರೆಯನ್ನು ಹಾಕುತ್ತಿದ್ದೀರಿ. ಈ ಹಿಂದೆ ಸದನ ಸಮಿತಿ 13 ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಮಾಡಿದ್ದು ಅವುಗಳನ್ನು ಇಂಪ್ಲಿಮೆಂಟ್ ಮಾಡಲು 6 ತಿಂಗಳ ಅವಧಿಯನ್ನು ಕೊಟ್ಟಿತ್ತು. ಹೆಚ್ಚು ಕಡಿಮೆ 5 ತಿಂಗಳು ಮತ್ತೆ ಸೇರಿಲ್ಲ. ಈಗ ಮತ್ತೆ

ಸದನವನ್ನು ಸೇರುತ್ತಿದ್ದೇವೆ. ನಾನು ಹೇಳುವುದೇನೆಂದರೆ ಈ ಐದು ತಿಂಗಳ ಅವಧಿಯಲ್ಲಿ 13 ಸಿಫಾರಸ್ಸುಗಳಲ್ಲಿ ಶೇಕಡ 80 ರಿಂದ 90 ರಷ್ಟಾದರೂ ಶಿಫಾರಸ್ಸುಗಳು ಇಂಪ್ಲಿಮೆಂಟ್ ಆಗಿರಬೇಕು. ಆ ಸಲಹೆಗಳನ್ನು ತಾವು ಎಷ್ಟುಸಲಹೆಗಳನ್ನು ಜಾರಿಗೆ ತಂದಿದ್ದೀರಿ ಎಂಬ ಬಗ್ಗೆ ಈ ಸದನಕ್ಕೆ ಮನವರಿಕೆ ಮಾಡಿಕೊಡಬೇಕು. ಆ ರೀತಿಯಲ್ಲಿ ತಾವು ಮನವರಿಕೆಯನ್ನು ಸದನಕ್ಕೆ ಮನವರಿಕೆ ಮಾಡಿಕೊಡಬೇಕು. ಆ ರೀತಿಯಲ್ಲಿತಾವು ಮನವರಿಕೆಯನ್ನು ಸದನಕ್ಕೆ ಕೊಟ್ಟ ನಂತರ ಸದನ ಸಮಿತಿಯನ್ನು ಮಾಡಿ. ಈ ಹಿಂದೆ ಹೇಗೆ ಜಂಟಿ ಸದನ ಸಮಿತಿಯನ್ನು ಮಾಡಿದ್ದರೋ ಅದೇ ರೀತಿಯಲ್ಲಿ ಸದನ ಸಮಿತಿಯನ್ನುಮಾಡಿ ಅದರ ಮುಂದೆ ಈ ಹಿಂದೆ ಏನು ಜಂಟೀ ಸದನ ಸಮಿತಿ ಸಲಹೆಗಳನ್ನು ಮಾಡಿತ್ತು ಅವುಗಳಲ್ಲಿ ಎಷ್ಟನ್ನು ತಾವು ಜಾರಿಗೆ ತಂದಿದ್ದೀರಿ, ಎಷ್ಟರ ಮಟ್ಟಿಗೆ ತಾವು ರಿಸೋರ್ಸ್ ಮೊಬಿಲೈಸ್ ಮಾಡಿದ್ದೀರಿ, ಎಷ್ಟರ ಮಟ್ಟಿಗೆ ವಿದ್ಯುತ್ ಕಳ್ಳತನವನ್ನು ನಿಲ್ಲಿಸಿದ್ದೀರಿ, ಎಷ್ಟರಮಟ್ಟಿಗೆ ತಾವು ಬಾಕಿಯನ್ನು ವಸೂಲಿ ಮಾಡಿದ್ದೀರಿ ಎಂಬ ಬಗ್ಗೆ ವಿವರಗಳನ್ನು ಸಮಿತಿ ಮುಂದೆ ಇಟ್ಟರೆ ಮಾತ್ರ ಅದು ಸೂಕ್ತವಾದ ಕಾರ್ಯವಾಗುತ್ತದೆ. ಆ ಸಮಿತಿಯಲ್ಲಿ ಇವುಗಳ ಬಗ್ಗೆ ಒಂದು ನಿರ್ಣಯವಾಗುವ ವರೆಗೆ ತಾವು ಈಗ ಏನು ನೋಟಿಫಿಕೇಷನ್ ಹೊರಡಿಸಿದ್ದೀರಿ ಅದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ಆ ರೀತಿಯಲ್ಲಿ ತಾವು ನೋಟಿಫಿಕೇಷನ್ ಹಿಂದಕ್ಕೆ ತೆಗೆದುಕೊಳ್ಳದಿದ್ದರೆ ಬಹುಶಃ ಅದರ ಪರಿಣಾಮವನ್ನು ತಾವು ಎದುರಿಸಬೇಕಾಗುತ್ತದೆ. ಈ ಬಗ್ಗೆ ಎಲ್ಲಾ ವಿರೋಧ ಪಕ್ಷಗಳವರು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಈ ನೋಟಿಫಿಕೇಷನ್‌ನಿಂದ ಸಾಮಾನ್ಯ ಜನರಿಗೆ ಹೆಚ್ಚು ಪರಿಣಾಮ ಬೀರುತ್ತದೆ. ನೀವು ಪುನಃ ದರವನ್ನು ಹೆಚ್ಚಿಸುವ ಬಗ್ಗೆ ಏಕೆ ಯೋಚನೆ ಮಾಡಿದಿರೋ ನನಗಂತೂ ಅರ್ಥವಾಗುತ್ತಿಲ್ಲ. ಆದುದರಿಂದ ತಾವು ದಯವಿಟ್ಟು ಆ ನೋಟಿಫಿಕೇಷನ್‌ನ್ನು ವಿತ್‌ಡ್ರಾ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅದರ ಪರಿಣಾಮವನ್ನು ನೀವು ಎದುರಿಸಬೇಕಾಗುತ್ತದೆ. ಇದನ್ನರಿತು ನೀವೇ ತಕ್ಷಣ ವಿತ್‌ಡ್ರಾ ಮಾಡಿಕೊಳ್ಳುತ್ತೇವೆ ಮತ್ತು ಇದರ ಬಗ್ಗೆ ಪುನಃ ಜಂಟೀ ಸದನ ಸಮಿತಿ ಒಂದು ನಿರ್ಣಯವನ್ನು ಮಾಡಲಿ ಎಂದು ತಮ್ಮ ಅನಿಸಿಕೆಯೇನಾದರೂ ಇದ್ದರೆ ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಅದನ್ನು ಬಿಟ್ಟು ನಾವು ಇದನ್ನು ವಿತ್‌ಡ್ರಾ ಮಾಡಿಕೊಳ್ಳುವುದೇ ಇಲ್ಲ, ಏನಾಗುತ್ತದೋ ಆಗಲಿ ಎಂಬ ಧೋರಣೆಯನ್ನು ನೀವು ತಾಳಿದರೆ ಆಗ ನಾವೂ ಕೂಡ ಒಂದು ನಿರ್ಣಯವನ್ನು ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಈ ಕಡೆ ಇರುವ ಸದಸ್ಯರುಗಳು ಮತ್ತು ಆ ಕಡೆ ಇರುವ ಸದಸ್ಯರುಗಳು ರೈತರ ಹೆಸರು ಹೇಳಿ, ಬಡವರ ಹೆಸರು ಹೇಳಿಕೊಂಡು ಬಂದಿರುವವರು. ಇಂದು ಮನೆಗಳಲ್ಲಿ ಬಳಸುವ ಗೃಹೋಪಯೋಗಿ ವಿದ್ಯುತ್‌ದರವನ್ನೂ ಕೂಡ ಹೆಚ್ಚು ಮಾಡಿದ್ದೀರಿ. ಅದೂ ಯೂನಿಟ್‌ವೈಸ್ ಹೆಚ್ಚು ದರ ಫಿಕ್ಸ್ ಮಾಡಿದ್ದೀರಿ.

ಇದನ್ನು ನೆನಪಿಸಿಕೊಂಡರೆ ಸಾಕು ಯಾರೂ ಮನೆಯಲ್ಲಿ ಫ್ಯಾನ್ ಉಪಯೋಗಿಸುವಂತಿಲ್ಲ ಆ ರೀತಿಯಲ್ಲಿ ಹೊಸದಾಗಿ ತಾವು ಹೊರಡಿಸಿರುವ ನೋಟಿಫಿಕೇಷನ್ ಪರಿಣಾಮ ಬೀರುತ್ತಿದೆ. ಅಷ್ಟು ಕೆಟ್ಟ ರೀತಿಯಲ್ಲಿ ಇರುವ ನೋಟಿಫಿಕೇಷನ್‌ನ್ನು ದಯವಿಟ್ಟು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕು. ಇದಲ್ಲದೆ ಇದರ ಬಗ್ಗೆ ಒಂದು ಸದನ ಸಮಿತಿಯನ್ನು ಮಾಡಿ ಈ ಹಿಂದೆ ಜಂಟಿ ಸದನ ಸಮಿತಿ ಕೊಟ್ಟಂಥ ಸಲಹೆಗಳ ಬಗ್ಗೆ ಪುನಃ ಕೂಲಂಕುಷವಾಗಿ ಪರಿಶೀಲನೆ ಮಾಡಿ ಚರ್ಚೆ ಮಾಡಿ ಅದರ ಆಧಾರದ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

11. ಪ್ರಕಟಣೆ

ದಿನಾಂಕ 28ನೇ ಜುಲೈ 1997ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಪ್ರಸಕ್ತ ಅಧಿವೇಶನದಲ್ಲಿ ಪ್ರತಿ ದಿನ ಬೆಳಗ್ಗೆ 10-00 ಘಂಟೆಯಿಂದ ಅಪರಾಹ್ನ 1-30 ರವರೆಗೆ ಮತ್ತು ಮಧ್ಯಾಹ್ನ 2-30 ರಿಂದ ಸಂಜೆ 6-00 ಘಂಟೆಯವರೆಗೆ ಸಭೆ ಸೇರಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

30-7-97 ಬುಧವಾರ ಹಾಗೂ 31-7-97 ಗುರುವಾರ	ಪ್ರಶ್ನೋತ್ತರ ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ಅನುದಾನ ಬೇಡಿಕೆಗಳ ಮೇಲೆ ಚರ್ಚೆ
1-8-97 ಶುಕ್ರವಾರ	1) ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದಂತೆ ಮಾನ್ಯ ಸಚಿವರಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು. 2) ಪ್ರಶ್ನೋತ್ತರ 3) ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಅನುದಾನ ಬೇಡಿಕೆಗಳ ಮೇಲೆ ಚರ್ಚೆ 4) ಖಾಸಗಿ ಕಾರ್ಯಕಲಾಪಗಳು